

ಲೇಖಕರು

## ಪೂಜ್ಯ ಆಚಾರ್ಯ ಬುದ್ಧರಕ್ಖಿತರು

ಪೂಜ್ಯರು ಮಹಾ ಬೋಧಿ ಸೊಸೈಟಿ ಬೆಂಗಳೂರಿನ ಸಂಸ್ಥಾಪಕ ಅಧ್ಯಕ್ಷರಾಗಿದ್ದಾರೆ. ಅವರು 1954ರಲ್ಲಿ ಛಟ್ಠಸಂಗಾಯನ, ಅಂದರೆ ಆರನೇ ಮಹಾ ಬೌದ್ಧ ಸಮ್ಮೇಳನದಲ್ಲಿ ಸಂಪಾದಕ ಮಂಡಳಿಯ ಸದಸ್ಯರಾಗಿ ಬರ್ಮಾದ ರಂಗೂನಿನಲ್ಲಿ ಕೆಲಸ ಮಾಡಿದರು. ಈ ಸಮ್ಮೇಳನವು ತ್ರಿಪಿಟಕವನ್ನು ಪ್ರಕಾಶಗೊಳಿಸಿತು.

1956ರಲ್ಲಿ ಬೆಂಗಳೂರಿನಲ್ಲಿ ಮಹಾ ಬೋಧಿ ಸೊಸೈಟಿಯನ್ನು ಸ್ಥಾಪಿಸಿ ನಂತರದ ದಿನಗಳಲ್ಲಿ ಅನೇಕ ಬೌದ್ಧ ಕೇಂದ್ರಗಳನ್ನು ಭಾರತ ಮತ್ತು ವಿದೇಶದಲ್ಲಿ ಸ್ಥಾಪಿಸಿದರು. ಭಿಕ್ಖು ತರಬೇತಿ ಕೇಂದ್ರ, ಮಹಾಬೋಧಿ ಬೌದ್ಧ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಿದರು. ಬೌದ್ಧ ಮಾಸಿಕ ಪತ್ರಿಕೆಗಳನ್ನು ನಡೆಸುತ್ತಿದ್ದಾರೆ. ನೂರಾರು ಪುಸ್ತಕಗಳನ್ನು ಬರೆದಿದ್ದಾರೆ. ಕನ್ನಡ ತಿಪಿಟಕ ಗ್ರಂಥಮಾಲೆ ಪ್ರಾರಂಭಿಸಿ ಭಗವಾನ್ ಬುದ್ಧರ ಪವಿತ್ರ ಉಪದೇಶಗಳನ್ನು ಪಾಳಿ ಭಾಷೆಯಿಂದ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸುವ ಬೃಹತ್ ಯೋಜನೆಗೆ ಚಾಲನೆ ನೀಡಿದ್ದಾರೆ. ಬೌದ್ಧ ಅಧ್ಯಯನ ಕೇಂದ್ರವನ್ನು ವಿಶ್ವವಿದ್ಯಾನಿಲಯವನ್ನಾಗಿಸಲು ರೂಪುರೇಷೆಗಳನ್ನು ಕೊಟ್ಟಿದ್ದಾರೆ. ಭಾರತದಲ್ಲಿ ಇಂದು ಅತಿ ಹಿರಿಯ ಭಂತೇಜಿಯಾಗಿದ್ದು ಬೌದ್ಧ ಸಮಾಜ ನಿರ್ಮಾಣದ ಕೆಲಸದಲ್ಲಿ ತೊಡಗಿದ್ದಾರೆ. ೮೦ ವರ್ಷಗಳ ಅವರ ಧಮ್ಮ ಸೇವೆಯಿಂದ ವಿಶೇಷವಾಗಿ ಕರ್ನಾಟಕದಲ್ಲಿ ಇಂದು ಬುದ್ಧ ಧಮ್ಮ ಅನೇಕರಿಗೆ ತಲುಪುತ್ತಿದೆ.

**BUDDHA VACHANA TRUST**

MAHA BODHI SOCIETY, GANDHINAGAR, BANGALORE - 560 009, INDIA.

ಮಹಾಬೋಧಿ ಸುವರ್ಣ ಪುಸ್ತಕ ಮಾಲಿಕೆ 34

# ಜೀವನದ ಶ್ರೇಷ್ಠ ಮಂಗಳಗಳು

ಸಂಪುಟ–೬



ಪೂಜ್ಯ ಆಚಾರ್ಯ ಬುದ್ಧರಕ್ಖಿತ

# ಜೀವನದ ಶ್ರೇಷ್ಠ ಮಂಗಳಗಳು

**ಸಂಪುಟ–6**

ಲೇಖಕರು :

**ಪೂಜ್ಯ ಆಚಾರ್ಯ ಬುದ್ಧರಕ್ಖಿತ**

ಕನ್ನಡಕ್ಕೆ :

ಅನೀಶ್ ಬೋಧ್


ಬುದ್ಧ ವಚನ ಟ್ರಸ್ಟ್

ಮಹಾ ಬೋಧೀ ಸೊಸೈಟಿ

ಗಾಂಧಿನಗರ, ಬೆಂಗಳೂರು–560 009

ಪ್ರಕಾಶನ :

**ಬುದ್ಧ ವಚನ ಟ್ರಸ್ಟ್**

14, ಕಾಳಿದಾಸ ಮಾರ್ಗ

ಗಾಂಧಿನಗರ, ಬೆಂಗಳೂರು–560 009

ದೂರವಾಣಿ : 080–22250684

ಫ್ಯಾಕ್ಸ್ : 080–22264438

E-mail : books@mahabodhi.info

Web : www.mahabodhi.info



**© ಬುದ್ಧ ವಚನ ಟ್ರಸ್ಟ್ – ಮಾರ್ಚ್ 2011**



**1000 ಪ್ರತಿಗಳು**

**ಮುಖಪುಟ ವಿನ್ಯಾಸ : ಸಿ. ಚಂದ್ರಶೇಖರ್**

**ಬೆಲೆ ರೂ. 40/–**

ಮುದ್ರಕರು :

**ಶ್ರೀ ಅರವಿಂದ್ ಪ್ರಿಂಟರ್ಸ್**

ಸರಸ್ವತಿಪುರಂ, ಬೆಂಗಳೂರು–560 096

ದೂ : 080–23498198, ಮೊ : 9916461691

## ಮುನ್ನುಡಿ

ಜೀವನದ ಶ್ರೇಷ್ಠ ಮಂಗಳಗಳು ಭಗವಾನ ಬುದ್ಧರ ರಕ್ಷಣೆಯ ಸೂತ್ರವಾದ ಮಹಾ ಮಂಗಳ ಸುತ್ತವನ್ನು ಆಧರಿಸಿದೆ. ಇದನ್ನು ರಕ್ಷಣೆಯ ಸೂತ್ತ ಎನ್ನಲು ಕಾರಣವೇನೆಂದರೆ ಅದು 1. ಎಲ್ಲ ದುಷ್ಟ ಮತ್ತು ಕೆಟ್ಟತನಗಳಿಂದ ರಕ್ಷಿಸುತ್ತದೆ. 2. ನಮ್ಮ ಆಧ್ಯಾತ್ಮಿಕ ಜೀವನವನ್ನು ಕಾಪಾಡುತ್ತದೆ. 3. ಜೀವನದಲ್ಲಿ ಒಳ್ಳೆಯದನ್ನು ತರುತ್ತದೆ.

ಈ ಸೂತ್ರದ ಪ್ರಕಾರ ಮೂವತ್ತೆಂಟು ಮಂಗಳಗಳಿವೆ. ಹನ್ನೆರಡು ಗಾಥೆಗಳಲ್ಲಿ ಈ ಮಂಗಳಗಳನ್ನು ಜೀವನವನ್ನೇ ಜೀವನದ ಶ್ರೇಷ್ಠ ಮಂಗಳಗಳನ್ನಾಗಿ ಪರಿವರ್ತಿಸುವ ಹಂತ ಹಂತವಾಗಿರುವ ಮಾರ್ಗವನ್ನಾಗಿ ಸುಂದರವಾಗಿ ನಿರೂಪಿಸಿದ್ದಾರೆ. ಅಂದರೆ ಜೀವನ ಹೇಗೆ ನಡೆಸಬೇಕೆಂದರೆ ಇಲ್ಲಿಯೇ ಈಗಲೇ ಮತ್ತು ಭವಿಷ್ಯದಲ್ಲಿ ಸುಖವನ್ನು ತರುವಂತಹದಾಗಿರಬೇಕು. ಮಂಗಳದ ಅರ್ಥ ಅದು ಒಬ್ಬನನ್ನು ಆಧ್ಯಾತ್ಮಿಕ ಮಾರ್ಗದಲ್ಲಿ ಬೆಳೆಸುತ್ತದಲ್ಲದೆ ಅದೇ ಹೊತ್ತಿಗೆ ಭೌತಿಕ ಸಂಪತ್ತನ್ನು ತರುತ್ತದೆ.

ಜೀವನದ ಶ್ರೇಷ್ಠ ಮಂಗಳಗಳು ಸರಣಿಯನ್ನು 1956ರಲ್ಲಿ ಸ್ಥಾಪಿಸಿದ ಮಹಾ ಬೋಧಿ ಸೊಸೈಟಿಯ ಸುವರ್ಣ ಜಯಂತಿಯ ನೆನಪಿಗಾಗಿ ಹೊರತರಲಾಗಿದೆ.

ಎಲ್ಲ ಜೀವಿಗಳೂ ಸುಖವಾಗಿರಲಿ !

**ಪೂಜ್ಯ ಆಚಾರ್ಯ ಬುದ್ಧರಕ್ಖಿತ**
ಸಂಸ್ಥಾಪಕ ಅಧ್ಯಕ್ಷರು
ಮಹಾ ಬೋಧಿ ಸೊಸೈಟಿ, ಬೆಂಗಳೂರು



**ಕೊಡುಗೆ :**

**"ಸಬ್ಬ ದಾನಂ ಧಮ್ಮ ದಾನಂ ಜಿನಾತಿ"**
**ಎಲ್ಲ ದಾನಗಳಲ್ಲಿ ಧಮ್ಮ ದಾನವು ಶ್ರೇಷ್ಠವಾದುದು**

ಈ ಪುಸ್ತಕದ ಪ್ರಕಾಶನಕ್ಕೆ ಈ ಕೆಳಗಿನವರು ದಾನ ಮಾಡಿದ್ದಾರೆ

**ಶ್ರೀಮತಿ ಕೆ.ಆರ್. ಶಿವಮ್ಮ**
**ಶ್ರೀ ವೆಂಕಟೇಶಪ್ಪ**
**ಮತ್ತು**
**ಶಿವಾನಿ**

ಈ ಧಮ್ಮ ದಾನದ ಪುಣ್ಯ ಫಲದಿಂದ ಸಕಲ ಜೀವರಾಶಿಗಳು ನಿಬ್ಬಾಣ ಪಡೆಯಲಿ ಎಂದು ಆಶಿಸುತ್ತೇವೆ. ಈ ಪುಣ್ಯಕಾರ್ಯದ ಫಲ ಇವರ ಎಲ್ಲ ಗತಿಸಿದ ಹಿರಿಯರಿಗೆ, ಬಂಧು ಬಳಗದವರಿಗೆ ಮತ್ತು ಎಲ್ಲರಿಗೂ ಮುಟ್ಟಲಿ!

ಎಲ್ಲ ಜೀವಿಗಳೂ ಸುಖವಾಗಿರಲಿ!

# ಜೀವನದ ಶ್ರೇಷ್ಠ ಮಂಗಳಗಳು

## ಬೋಧಿಸತ್ತ ಸಂಖ

ಒಮ್ಮೆ ಬುದ್ಧ ಭಗವಾನರು ಶ್ರಾವಸ್ತಿಯಲ್ಲಿ ಅನಾಥಪಿಂಡಿಕನ ಜೇತವನ ವಿಹಾರದಲ್ಲಿ ತಂಗಿದ್ದರು. ಒಂದು ಸಂಜೆ ಭಗವಾನರು ಎಂದಿನಂತೆ ದಿನದ ಬೋಧನೆಯನ್ನು ನೀಡುತ್ತಿದ್ದರು. ತಥಾಗತರ ಏಳಿಗೆಮಯ ಧಮ್ಮದ ವಿವರಣೆಯನ್ನು ಕೇಳುತ್ತಿದ್ದಂತೆ ಒಬ್ಬ ಶ್ರದ್ಧಾವಂತ ಉಪಾಸಕ ಮಹತ್ತರವಾಗಿ ಉತ್ತೇಜನಗೊಂಡನು. ಆನಂದ ತುಂಬಿದ ಹೃದಯದಿಂದ ಆತನು ಬುದ್ಧರ ಬಳಿಗೆ ಹೋದನು. ಅವರ ಪಾದಕ್ಕೆ ಗೌರವದಿಂದ ವಂದಿಸಿ, ಅವರನ್ನು ಹಾಗು ಅವರ ಅಗ್ರಶ್ರಾವಕರಾದ ಸಾರಿಪುತ್ತ ಮತ್ತು ಮೊಗ್ಗಲಾನರ ಸಹಿತ 500 ಶ್ರೇಷ್ಠ ಅರಹಂತರನ್ನು ಮರುದಿನದ ಮಧ್ಯಾಹ್ನದ ಊಟಕ್ಕೆ ಆಹ್ವಾನಿಸಿದನು.

ಮನೆಗೆ ಹಿಂತಿರುಗುತ್ತಿದ್ದಂತೆಯೇ ಆ ಶ್ರೀಮಂತ ಶ್ರದ್ಧಾಳುವಂತ ತಕ್ಷಣ ತನ್ನ ಅಧಿಕಾರಿಗಳಿಗೆ ಮತ್ತು ಕೆಲಸಗಾರರಿಗೆ ತನ್ನ ಭವನದ ಮುಂದಿನ ಅಂಗಳದಲ್ಲಿ ದೊಡ್ಡ ಗುಡಾರ ಹಾಕಲು ಆಜ್ಞಾಪಿಸಿದನು. ಆ ದಿನಗಳಲ್ಲಿ ಪ್ರಚಲಿತವಾಗಿರುವ ಕಲಾಭರಿತ, ಅಲಂಕೃತ ಗುಡಾರವನ್ನೇ ಹಾಕಿಸಿದನು. ಆಹಾರ ಸಿದ್ಧವಾದ ನಂತರ, ಊಟ ಸಿದ್ಧವಾಗಿದೆ ಎಂದು ಸುದ್ದಿ ಮುಟ್ಟಿಸಲು ವ್ಯಕ್ತಿಯೊಬ್ಬನನ್ನು ಕಳುಹಿಸಿದನು. ಆನಂತರ ಬುದ್ಧ ಭಗವಾನರು, ಅಗ್ರ ಶಿಷ್ಯರು ಮತ್ತು 500 ಮಂದಿ ಅರಹಂತರು ಆ ಗುಡಾರಕ್ಕೆ ಆಗಮಿಸಿ ತಮಗಾಗಿ ಸಿದ್ಧಪಡಿಸಿದಂತಹ ಆಸನಗಳಲ್ಲಿ ಆಸೀನರಾದರು. ಬುದ್ಧರನ್ನು ಮತ್ತು ಭಿಕ್ಷುಗಳನ್ನು ಸ್ವಾಗತಿಸಲು ಆ ಉಪಾಸಕನು ತನ್ನ ಕುಟುಂಬ ಸಮೇತ ಬಂದು ಭಕ್ತಿಯಿಂದ ಸ್ವಾಗತ ನೀಡಿದನು. ನಂತರ ತಮ್ಮ ಕೈಯಾರೆ ಬುದ್ಧರಿಗೆ ಮತ್ತು ಅರಹಂತರಿಗೆ ಶ್ರೇಷ್ಠ, ರುಚಿಕರ ಆಹಾರವನ್ನು ಬಡಿಸಿದರು. ಆಹಾರ ಸೇವನೆಯ ನಂತರ ಬುದ್ಧ ಭಗವಾನರು ಕೃತಜ್ಞತೆಯುತ ಧಮ್ಮ



ಪ್ರವಚನವನ್ನು ನೀಡಿದರು. ಅಲ್ಲಿದ್ದಂತಹ ಪ್ರತಿಯೊಬ್ಬರಿಗೂ ಸ್ಫೂರ್ತಿಯನ್ನು ತುಂಬಿದರು.

ಇದರಿಂದ ಸ್ಫೂರ್ತಿ ಹೊಂದಿದ ಆ ಉಪಾಸಕನು ಭಗವಾನರಲ್ಲಿ ಮರುದಿನವೂ ಆಹಾರಕ್ಕೆ ಬರಬೇಕೆಂದು ಕೋರಿಕೊಂಡನು. ಮಾರನೇ ದಿನವೂ ಆ ಆಹಾರವೂ ಹಾಗೆಯೇ ಬೋಧನೆಯೂ ಅಷ್ಟೇ ಧಮ್ಮೋತ್ತೇಜನ ನೀಡಿತು. ಹೀಗಾಗಿ ಹೀಗೆಯೇ ಆತನು ಮೂರನೆಯ, ನಾಲ್ಕನೆಯ, ಐದು, ಆರು ಮತ್ತು ಏಳನೇ ದಿನವೂ ದಾನಕ್ಕೆ ಆಹ್ವಾನಿಸಿ ಭಕ್ತಿಯಿಂದ ಸೇವೆ ಸಲ್ಲಿಸಿದನು.

ಏಳನೆಯ ದಿನದ ಔತಣವು ಮುಗಿದಾಗ ಆ ಉಪಾಸಕನು ವಿಹಾರದ ಅವಶ್ಯಕತೆಗಳನ್ನು ನೀಗಿಸಲು ವಿಶೇಷ ದಾನಗಳನ್ನು ಸಿದ್ಧಪಡಿಸಿದನು. ಆತನು ಬುದ್ಧರಿಗೆ ಭವ್ಯವಾಗಿ ನೇಯ್ದಂತಹ ಅತ್ಯಂತ ಬೆಲೆಬಾಳುವ ಚೀವರವನ್ನು ದಾನ ಮಾಡಿದನು. ಹಾಗೆಯೇ ಆತನು ಅಗ್ರ ಶ್ರಾವಕರಿಗೂ ವಿಶೇಷವಾದ ಚೀವರಗಳನ್ನು ನೀಡಿದನು. ಮತ್ತು 500 ಅರಹಂತರಿಗೂ ಉನ್ನತ ಗುಣಮಟ್ಟದ ಚೀವರಗಳನ್ನು ದಾನ ಮಾಡಿದನು. ನಂತರ ಆತನು ಬುದ್ಧರಿಗೆ ವಿಶೇಷವಾದ ಚಪ್ಪಲಿಯನ್ನು ದಾನ ನೀಡಿದನು. ಹಾಗೆಯೇ ಅಗ್ರ ಶ್ರಾವಕರಿಗೂ ಮತ್ತು 500 ಮಂದಿ ಅರಹಂತರಿಗೂ ಆತನು ದಾನ ಮಾಡಿದನು. ಯಾವಾಗ ಇವೆಲ್ಲ ಕೊಡುಗೆ ನೀಡಿ ಆಯಿತೋ ಆಗ ಬುದ್ಧ ಭಗವಾನರು ಸಂದರ್ಭೋಚಿತವಾದ ಧಮ್ಮ ಪ್ರವಚನವನ್ನು ನೀಡಿ ಕೃತಜ್ಞತೆ ಸಲ್ಲಿಸಿದರು. ಗೌರವಯುತ, ಭಕ್ತಿಪೂರ್ವಕವಾಗಿ ತೆರೆದ ಮನಸ್ಸಿನಿಂದ ಮತ್ತು ಮುಕ್ತ ಹಸ್ತದಿಂದ ದಾನ ನೀಡಿದುದರ ಬಗ್ಗೆ ಶ್ಲಾಘಿಸಿದರು. ಹಿಂದೆ ಬೋಧಿಸತ್ತರಾಗಿದ್ದಾಗ ನಡೆದ ಘಟನೆಯನ್ನು ಹೀಗೆ ಗಮನಕ್ಕೆ ತಂದರು.

“ಉಪಾಸಕ, ಅತಿ ದೀರ್ಘಕಾಲದ ಹಿಂದೆ ಇದ್ದಂತಹ ಬುದ್ಧರ ಶಾಸನವು ಸಹಾ ಅಳಿದುಹೋಯಿತು, ನಂತರ ಪಚ್ಚೇಕ ಬುದ್ಧರ ಸಮೂಹವು ಉದಯಿಸಿತು, ಅವರೆಲ್ಲ ಶೀಲ ಮತ್ತು ಸಮಥ ಸಮಾಧಿಯ ಬೋಧನೆಗಳಿಂದ ಲೋಕದಲ್ಲಿ ಚಿರಸ್ಮರಣೀಯ ಮಾಡಿದರು.

ಈ ಪಚ್ಚೇಕ ಬುದ್ಧರು ಹಿಮಾಲಯದಲ್ಲಿನ ಗಂಧಮಾದನ ಪರ್ವತದಲ್ಲಿರುವ ಗುಹೆಗಳಲ್ಲಿ ವಾಸವಾಗಿದ್ದರು. ಒಂದುದಿನ ಅವರು ಎಂದಿನಂತೆ ಆಹಾರ ಪಡೆಯಲೆಂದು ವಿವಿಧ ದಿಕ್ಕುಗಳಿಗೆ ಹೊರಟರು. ಹಾಗೇ ಆಹಾರ ಸ್ವೀಕರಿಸಿದ ನಂತರ ದಾನಿಗಳಿಗೆ ಬೋಧನೆಯನ್ನು ಮಾಡುತ್ತಿದ್ದರು. ಆ ಬೋಧನೆಗಳು ಶೀಲಕ್ಕೆ ಮತ್ತು ಸಮಾಧಿಗೆ ಸಂಬಂಧಪಟ್ಟಿರುವುದಾಗಿತ್ತು. ಶೀಲದಿಂದಾಗಿ ಪಾಪವನ್ನು ದಾಟುವಂತಾಗಿದ್ದರೆ, ಸಮಥ ಸಮಾದಿಯಿಂದಾಗಿ ಚಿತ್ತಾಭಿವೃದ್ಧಿಗೊಳಿಸಬಹುದಾಗಿತ್ತು. ಆದರೆ ಅವರು ಪಞ್ಞಾಭಿವೃದ್ಧಿಯ ವಿಪಸ್ಸನ ಧ್ಯಾನ ಅಥವಾ ವಿಪಸ್ಸನ ಪಞ್ಞಾ (ನಾಲ್ಕು ಆರ್ಯಸತ್ಯಗಳ ಜ್ಞಾನ) ಬೋಧಿಸಿರುತ್ತಿರಲಿಲ್ಲ.

ಸಮ್ಮಾ ಸಂಬುದ್ಧರಂತೆಯೇ ಈ ಪಚ್ಚೇಕ ಬುದ್ಧರು ಸಹಾ ಸ್ವ-ಪರಿಶ್ರಮದಿಂದಲೇ ಸ್ವಯಂ ಪ್ರಾಪ್ತಿ ಮಾಡಿದ್ದರೂ ಆರ್ಯಸತ್ಯಗಳನ್ನು ಮತ್ತು ಎಲ್ಲಾ ಅಭಿಜ್ಞಾ ಬಲಗಳನ್ನು ಸಿದ್ಧಿಸಿದ್ದರೂ ಸಹಾ ಅವರು ಕೇವಲ ಶೀಲ ಮತ್ತು ಸಮಾಧಿಯ ಬೋಧನೆಗಳನ್ನು ಮಾತ್ರ ಬೋಧಿಸುತ್ತಿದ್ದರು. ಆದರೆ ವಿಪಸ್ಸನ ಪಞ್ಞಾದ ಬಗ್ಗೆ ಬೋಧಿಸುತ್ತಿರಲಿಲ್ಲ.

ಈ ರೀತಿಯಾಗಿ ಬೋಧಿಸುತ್ತ ಜನರಿಗೆ ಸಹಾಯ ಮಾಡುತ್ತಿದ್ದರು. ಹೀಗೆ ನಾಗರಿಕ ಸಮಾಜವನ್ನು ಸೃಷ್ಟಿಸುತ್ತ ಮತ್ತು ನಿಯಂತ್ರಿಸುತ್ತಾ ಆ ಸಂತರು ಉನ್ನತವಾದ ಬ್ರಹ್ಮವಿಹಾರದ ದಿವ್ಯಸ್ಥಿತಿಗಳನ್ನು ಪ್ರಾಪ್ತಿಮಾಡಲು ಸಹಾಯ ಮಾಡುತ್ತಿದ್ದರು. ಆದರೆ ಅವರು ವಿಪಸ್ಸನ ಪಞ್ಞಾವನ್ನು ತಿಳಿಸುತ್ತಿರಲಿಲ್ಲ. ಏಕೆಂದರೆ ಅವರು ಲೋಕೋತ್ತರ ಮಾರ್ಗ ಮತ್ತು ಫಲಜ್ಞಾನಗಳನ್ನು ಮಾರ್ಗದರ್ಶಿಸಲು ಅಸಮರ್ಥರಾಗಿದ್ದರು.

ಇಂತಹ ಆ ಕಾಲದಲ್ಲಿ ಬೋಧಿಸತ್ವರು ಶ್ರೀಮಂತರ ಮನೆಯಲ್ಲಿ ಹುಟ್ಟಿದರು. ಅದು ಬನಾರಸ್‌ನ ಸುಖ್ಯಾತ ಬ್ರಾಹ್ಮಣರ ಕುಟುಂಬವಾಗಿತ್ತು. ಆಗ ಅವರ ಹೆಸರು "ಸಂಖಾಕುಮಾರ" ಎಂದಾಗಿತ್ತು. ಅವರು ವೈಭೋಗದ ಮಧ್ಯೆಯೇ ಬೆಳೆದರು. ಶಾಸ್ತ್ರಗಳ ಜ್ಞಾನ ಪಡೆದು, ಶೀಲದ ಜೀವನವನ್ನು ಆಚರಿಸಿದರು. ಅವರು ಶಾಸ್ತ್ರಗಳನ್ನು ಕಲಿಯುವಂತಹ ಬ್ರಾಹ್ಮಣರ ಕುಟುಂಬದಲ್ಲಿ ಹುಟ್ಟಿದರೂ ಸಹ ವಾಣಿಜ್ಯ ವ್ಯಾಪಾರಗಳಲ್ಲಿ ಅವರು



ತಮ್ಮನ್ನು ತೊಡಗಿಸಿಕೊಂಡಿದ್ದರು. ಅವರು ರಫ್ತು-ಆಮದಿನ ವ್ಯಾಪಾರದಲ್ಲಿ ಪರಿಣಿತರಾಗಿದ್ದರು. ಅವರು ಭಾರತದಿಂದ ಸರಕುಗಳನ್ನು ಪಾಶ್ಚಾತ್ಯ ದೇಶಗಳಿಗೆ ರಫ್ತು ಮಾಡಿ ಅಲ್ಲಿನ ಸರಕುಗಳನ್ನು ಇಲ್ಲಿ ಆಮದು ಮಾಡಿಕೊಳ್ಳುತ್ತಿದ್ದರು.

ತಮ್ಮ ತಂದೆ-ತಾಯಿಗಳ ಮೃತ್ಯುವಿನ ನಂತರ ಅವರೇ ಕುಟುಂಬದ ನಾಯಕರಾದರು. ಅವರು ನಾನಾ ಉದ್ಯೋಗಗಳನ್ನು ದಕ್ಷತೆಯಿಂದ ನಡೆಸಿದರು. ಜೊತೆಗೆ ಮಾನವತೆಯ ಮನೋಭಾವವನ್ನು ಹೊಂದಿದ್ದರು. ಅವರು ಬಹಿರಂಗವಾಗಿ ಹೇಳುತ್ತಿದ್ದುದು ಏನೆಂದರೆ "ದಾನ ಮಾಡಲೆಂದೇ ನಾನು ಸಂಪಾದಿಸುತ್ತಿರುವೆ". ಅವರು ದಾನವನ್ನು ದೊಡ್ಡ ವಿಧದಲ್ಲಿ ಆಚರಿಸುತ್ತಿದ್ದರು. ಉದಾಹರಿಸುವುದಾದರೆ ಆಹಾರ ದಾನ ಮಾಡುವ ಕೇಂದ್ರಗಳನ್ನು ಸ್ಥಾಪಿಸಿದ್ದರು. ಪ್ರಯಾಣಿಕರಿಗೆ ವಿಶ್ರಾಂತಿ ಧಾಮಗಳನ್ನು ನಿರ್ಮಿಸಿದ್ದರು. ಅನಾಥರಿಗೆ ಮನೆಗಳನ್ನು ನಿರ್ಮಿಸಿದ್ದರು. ಉಚಿತವಾಗಿ ಹಂಚಲೆಂದು ಔಷಧಿಯ ಉದ್ಯಾನ ವನವನ್ನು ನಿರ್ಮಿಸಿದ್ದರು. ಜನರಿಗೆ ಒಳಿತಾಗಲೆಂದು ಬಾವಿಗಳನ್ನು ಕಟ್ಟಿಸಿದ್ದರು. ಹೀಗಾಗಿ ಅವರು ತಮ್ಮ ದಾನದಿಂದಾಗಿ ಎಲ್ಲೆಡೆ ಗೌರವ ಪಡೆಯುತ್ತಿದ್ದರು.

ಒಂದುದಿನ ಅವರು ಸುವರ್ಣ ಭೂಮಿಗೆ ಪ್ರಯಾಣಿಸಲು ನಿರ್ಧರಿಸಿದರು. ಬಹುಶಃ ಅದು ಬರ್ಮಾ ಅಥವಾ ಥಾಯ್‌ಲ್ಯಾಂಡ್ ಆಗಿರಬಹುದು. ಅಲ್ಲಿಗೆ ಹಡಗಿನಲ್ಲಿ ಹೊರಟರು. ಆದರೆ ದುರಾದೃಷ್ಟವಶಾತ್ ಅವರ ಹಡಗು ಪ್ರಚಂಡ ಬಿರುಗಾಳಿಗೆ, ಚಂಡಮಾರುತಕ್ಕೆ ಎದುರಾಯಿತು. ಸಮುದ್ರವು ಪ್ರಕ್ಷುಬ್ಧವಾಯಿತು. ಪೂರ್ಣವಾಗಿ ಕ್ಷೋಭೆಗೆ ಒಳಗಾಯಿತು. ಅಲೆಗಳು ಎತ್ತರ ಗೋಪುರಗಳಿಗಿಂತಲೂ ಎತ್ತರಕ್ಕೆ ಏರಿ ಹಡಗನ್ನು ಅಪ್ಪಳಿಸಲು ಮೇಲೆದ್ದವು. ಆಗ ಬೋಧಿಸತ್ವರು ತಮಗೆ ತಾವೇ ಹೀಗೆ ಹೇಳಿಕೊಂಡರು. "ನಾನು ಪ್ರಯಾಣಿಸುವ ಮುನ್ನ ಈ ಯೋಚನೆಯಿಂದ ನಿರ್ಧಾರ ಕೈಗೊಂಡಿದ್ದೆ. 'ಒಮ್ಮೆ ನನ್ನ ಐಶ್ವರ್ಯವೆಲ್ಲಾ ನಾಶವಾದರೆ ನಾನು ದಾನ ಮಾಡಲು ಸಮರ್ಥನಾಗುವುದಿಲ್ಲ. ಅದು ಕರುಣಾಜನಕ ಸ್ಥಿತಿಯಾಗಿಬಿಡುತ್ತದೆ. ಹೀಗಾಗಿ ನನ್ನ ಐಶ್ವರ್ಯ ಅಳಿಯುವ ಮುಂಚೆಯೇ

ಹಣವನ್ನು ಸಂಪಾದಿಸಿ ನನ್ನ ಪ್ರಿಯ ನಗರಿಯಾದ ಮಾಲಿನಿಗೆ (ಬನಾರಸ್) ಹಿಂತಿರುಗುವೆ.

ನಾನು ಬೀಳ್ಕೊಡುವ ಮುನ್ನ ನನ್ನ ಹೆಂಡತಿ ಮತ್ತು ಮಕ್ಕಳಲ್ಲಿ ಹೀಗೆ ಆಜ್ಞಾಪಿಸಿದ್ದೆ: 'ನಾನು ಬರುವವರೆಗೆ ಅನ್ನಸಂತರ್ಪಣೆ ಮತ್ತು ಇನ್ನಿತರ ದಾನಾದಿ ಕಾರ್ಯಗಳನ್ನೆಲ್ಲಾ ಸರಿಯಾಗಿ ನಿರ್ವಹಿಸಬೇಕು'. ನಂತರ ನಾನು ನನ್ನ ಕೊಡೆ ಮತ್ತು ವಿಶೇಷ ಚಪ್ಪಲಿಯನ್ನು ಹಾಕಿಕೊಂಡು, ಜೊತೆಗೆ ಸೇವಕನನ್ನು ಕರೆದುಕೊಂಡು ಮಧ್ಯಾಹ್ನಕ್ಕೆ ಮುಂಚಿತವಾಗಿಯೇ ಬಂದರಿನ ಕಡೆ ಹೊರಟೆನು. ಮಧ್ಯದ ಸಮುದ್ರದವರೆಗೂ ಸುರಕ್ಷಿತವಾಗಿಯೇ ಸಂಚರಿಸಿದ ಹಡಗು ಈಗ ಭೀಕರ ಪ್ರಚಂಡ ಬಿರುಗಾಳಿಯ ಅಪಾಯಕ್ಕೆ ಎದುರಾಗಿದೆ. ಈಗ ನನ್ನ ಉತ್ತಮ ಕರ್ಮಗಳ ಹೊರತು ಬೇರ್‍ಯಾರು ಆಶ್ರಯರಿಲ್ಲ. ನಾನು ಪಾರಮಿತಗಳನ್ನು (ಪಾರಮಿ/ಪರಿಪೂರ್ಣತೆ) ಪೂರೈಸಲು ಸತ್ಕಾರಗಳನ್ನು ನಡೆಸುತ್ತಲೇ ಬಂದಿದ್ದೇನೆ" ಎಂದುಕೊಂಡರು.

ಪ್ರಯಾಣದ ಏಳನೆಯ ದಿನದಂದು, ಹಡಗು ಇದ್ದಕ್ಕಿದ್ದಂತೆ ಜಿಗಿದು, ಸೋರಿಕೆ ಪ್ರಾರಂಭವಾಯಿತು. ಸಮುದ್ರದ ನೀರೆಲ್ಲಾ ಒಳಬರಲಾರಂಭಿಸಿತು. ವಿಪತ್ತಿನ ಆ ನೀರನ್ನು ಹೊರಹಾಕಲು ಅಸಾಧ್ಯವಾಯಿತು. ಏಕೆಂದರೆ ರಭಸವು ಪ್ರಬಲವಾಗಿತ್ತು. ಆಗ ಪ್ರಯಾಣಿಕರೆಲ್ಲ ಭಯದಿಂದ ಪ್ರಲಾಪಿಸಲು ತೊಡಗಿದರು.

ಬೋಧಿಸತ್ತರ ಹೊರತು ಪ್ರತಿಯೊಬ್ಬರೂ ತಮ್ಮ ಇಷ್ಟದೇವನನ್ನು ಕೋರಿಕೊಳ್ಳಲು ಆರಂಭಿಸಿದರು. ಆ ಹಡಗು ನಾಶವಾಗುವ ಮುನ್ನವೇ ಬೋಧಿಸತ್ತ ಸಂಖಾರವರು ತಮ್ಮ ಶರೀರದ ಸುತ್ತ ಎಣ್ಣೆಯನ್ನು ಬಳಿದುಕೊಂಡರು. ಮತ್ತು ತುಪ್ಪವನ್ನು ಬೆಲ್ಲದೊಂದಿಗೆ ಮಿಶ್ರಮಾಡಿ ಅಪಾರವಾಗಿ ತಿಂದರು. ಹಾಗೆಯೇ ಸೇವಕನಿಗೂ ತಿನ್ನಿಸಿದರು. ನಂತರ ಅವರು ಹಡಗಿನ ಧ್ವಜಸ್ತಂಭದ ಮೇಲೆ ಏರಿದರು. ಸಮುದ್ರದ ಎಲ್ಲಾ ಭೀತಿಯನ್ನು ಮತ್ತು ಸಮುದ್ರದಲ್ಲಿರುವ ಎಲ್ಲಾ ಜೀವಿಗಳ ಬಗ್ಗೆ ಭಯವನ್ನು ತ್ಯಜಿಸಿ ಅವರು ಸಮುದ್ರದಲ್ಲಿ ಹಾರಿದರು. ಅವರನ್ನು ಅವರ ಸೇವಕನೂ ಹಿಂಬಾಲಿಸಿದನು.



ಅದಾದ ಕೆಲವು ಕ್ಷಣಗಳಲ್ಲೇ ಆ ಹಡಗು ನಾಶವಾಗಿ ಬಹಳಷ್ಟು ಪ್ರಯಾಣಿಕರು ತಮ್ಮ ಅಂತ್ಯವನ್ನು ಕಂಡರು. ಆದರೆ ಬೋಧಿಸತ್ತರು ಮತ್ತು ಅವರ ಸೇವಕನು ಈಜಲು ಆರಂಭಿಸಿದರು. ಅವರು ಏಳುದಿನ ಮತ್ತು ಏಳು ರಾತ್ರಿ ನಿರಂತರ ಈಜುತ್ತಲೇ ಇದ್ದರು. ಆಗ ಉಪೋಸಥದ ದಿನವು (ಹುಣ್ಣಿಮೆ) ಎದುರಾಯಿತು. ಅದು ಈ ದುರಂತ ಸಮಯದಲ್ಲೇ ಆಗಮಿಸಿದೆ. ಅವರು ಈಜುತ್ತಲೇ ಬಾಯಿಯನ್ನು ತೊಳೆದುಕೊಂಡರು. ನಂತರ ಉಪೋಸತದ ಶೀಲವನ್ನು ಸಂಕಲ್ಪಿಸಿದರು ಮತ್ತು ಬುದ್ಧರ, ಧಮ್ಮದ ಮತ್ತು ಸಂಘದ ಶ್ರೇಷ್ಠ ಸದ್ಗುಣಗಳ ಅನುಸ್ಮೃತಿಯಲ್ಲೇ ಈಜಾಡುತ್ತಿದ್ದರು.

ಅದೇ ಸಮಯದಲ್ಲಿ ಹಿಮಾಲಯದಲ್ಲಿ ಗಂಧಮಾದನ ಪರ್ವತದಲ್ಲಿನ ಗುಹೆಯಲ್ಲಿದ್ದ ಪಚ್ಚೇಕ ಬುದ್ಧರಿಗೆ ಧ್ಯಾನದಲ್ಲಿ ಬೋಧಿಸತ್ತರ ಕರುಣಾಜನಕ ಸ್ಥಿತಿ ಕಾಣಿಸಿತು. ಅವರಿಗೆ ಬೋಧಿಸತ್ತರು ಕೆಲವು ದಿನಗಳ ಹಿಂದೆ ಭಕ್ತಿಯಿಂದ ಸಹಾಯ ಮಾಡಿದ್ದು ಸ್ಪಷ್ಟವಾಗಿ ನೆನಪಿಗೆ ಬಂದಿತು. ಆಗ ಬೋಧಿಸತ್ತರು ತಮ್ಮ ಕುಟುಂಬಕ್ಕೆ ವಿದಾಯ ಹೇಳಿ ಹಡಗಿನತ್ತ ಧಾವಿಸುತ್ತಿದ್ದರು. ಆಗ ಮಾರ್ಗದ ಮಧ್ಯೆ ಅವರು ಪಚ್ಚೇಕ ಬುದ್ಧರನ್ನು ಕಂಡರು. ಆ ಪಚ್ಚೇಕ ಬುದ್ಧರು ಉರಿಬಿಸಿಲಿನಲ್ಲಿ ಬರಿಗಾಲಿನಲ್ಲಿದ್ದರು, ಅಂತಹುದರಲ್ಲಿ ಬರಿಗಾಲಿನಲ್ಲಿ ನಡೆಯುವುದು ಎಂತಹವರಿಗೂ ಕಷ್ಟವೇ ಆಗಿತ್ತು. ಅವರನ್ನು ಕಂಡ ಬೋಧಿಸತ್ತರು ತಕ್ಷಣ ಅವರ ಪಾದಕ್ಕೆ ವಂದಿಸಿ, ತಮ್ಮ ಹತ್ತಿರದಲ್ಲಿದ್ದ ಮನೆಗೆ ಆಹ್ವಾನಿಸಿದರು.

ಮನೆಯಲ್ಲಿ ಸೇವಕರು ನೀರನ್ನು ತಂದರು. ತಮ್ಮ ಕೈಯಾರೆ ಬೋಧಿಸತ್ತರು ಪಚ್ಚೇಕ ಬುದ್ಧರ ಪಾದಗಳನ್ನು ತೊಳೆದರು. ನಂತರ ಔಷಧಿಯ ಎಣ್ಣೆಯನ್ನು ಅವರ ಪಾದಕ್ಕೆ ಸವರಿದರು. ನಂತರ ತಾವು ಧರಿಸಿದ್ದ ಪಾದರಕ್ಷೆಯನ್ನು ಚೆನ್ನಾಗಿ ಒರೆಸಿ, ಪಚ್ಚೇಕ ಬುದ್ಧರ ಪಾದಕ್ಕೆ ಇಟ್ಟರು. ಹಾಗೆಯೇ ತಮ್ಮ ಬೆಲೆಬಾಳುವ ಛತ್ರಿಯನ್ನು ಸಹಾ ಅವರ ತಲೆಯ ಮೇಲೆ ಹಿಡಿದರು. ನಂತರ ಅವರು ಪಚ್ಚೇಕ ಬುದ್ಧರ ಪಿಂಡಪಾತ್ರೆಯನ್ನು ಕೈಗೆ ತೆಗೆದುಕೊಂಡು ಅದರಲ್ಲಿ ಪೌಷ್ಠಿಕಯುತ–ಸ್ವಾದಿಷ್ಟಮಯ ಆಹಾರವನ್ನು ತುಂಬಿಸಿ ಅತ್ಯಂತ ಭಕ್ತಿಯಿಂದ

ಸಮರ್ಪಿಸಿದರು ಮತ್ತು ಹೀಗೆ ನುಡಿದರು: "ದಯವಿಟ್ಟು ಈ ಪಾದರಕ್ಷೆಗಳೊಂದಿಗೆ ಸಂಚರಿಸಿರಿ ಮತ್ತು ನೆರಳಿಗಾಗಿ ಈ ಛತ್ರಿಯನ್ನು ಹಿಡಿಯಿರಿ. ಈ ಆಹಾರವನ್ನು ದಯವಿಟ್ಟು ಸ್ವೀಕರಿಸಿರಿ."

ಆಗ ಪಚ್ಚೇಕ ಬುದ್ಧರು ಆಹಾರವನ್ನು, ಛತ್ರಿಯನ್ನು ಮತ್ತು ಪಾದರಕ್ಷೆಗಳನ್ನು ಸ್ವೀಕರಿಸಿ ತಮ್ಮ ಹಾದಿಯನ್ನು ಹಿಡಿದರು. ಆ ದಿನದ ಮುಂಜಾನೆಯೇ ಪಚ್ಚೇಕ ಬುದ್ಧರು ಧ್ಯಾನದಿಂದ ಹೊರಬಂದಾಗ ಅವರಿಗೆ ಬೋಧಿಸತ್ವರಿಗೆ ಮುಂಬರುವ ಅಪಾಯವು ಗೋಚರವಾಯಿತು. ಆದ್ದರಿಂದಲೇ ಅವರು ಉದ್ದೇಶಪೂರ್ವಕವಾಗಿಯೇ ಗಂಧಮಾದನ ಪರ್ವತದಿಂದ ಬೋಧಿಸತ್ತ ಸಂಖಾರವರ ಸ್ಥಳಕ್ಕೆ ಬಂದಿದ್ದರು. ಈ ಸೇವೆಯಿಂದ ಆನಂಧಭರಿತರಾಗಿ ಬೋಧಿಸತ್ತರು ಪ್ರಯಾಣವನ್ನು ಆರಂಭಿಸಿದ್ದರು. ಅದಾದ ಏಳನೆಯ ದಿನಕ್ಕೆ ಹಡಗು ನಾಶವಾಗಿತ್ತು. ನಂತರದ ಏಳು ದಿನಗಳು ಅವರು ಈಜಾಡುತ್ತಲೇ ಸಮುದ್ರದಲ್ಲಿದ್ದರು.

ಹೀಗೆ ನೌಕಾಘಾತವಾಗಿ ಬೋಧಿಸತ್ತರು ನಿರಂತರವಾಗಿ ಈಜುತ್ತಿರುವುದು ಸಾಗರದಲ್ಲಿ ದೇವಿಯಾಗಿ ನೆಲೆಸಿದಂತಹ ಮಣಿಮೇಖಲದೇವಿ ಕಂಡಳು. ಆಕೆ ತನ್ನ ಎಲ್ಲಾ ಬಲಗಳಿಂದ ತಕ್ಷಣವೇ ಆತನನ್ನು ಕಾಪಾಡಲು ನಿರ್ಧರಿಸಿದಳು. ಆಕೆಯು ಶೀಲವಂತನಾದ ಬ್ರಾಹ್ಮಣ ಸಂಖಾರವರು ಸಮುದ್ರದಲ್ಲಿ ಈಜಾಡುತ್ತಿರುವುದನ್ನು ಕಂಡಳು. ಆಗ ಆಕೆ ಹೀಗೆ ಯೋಚಿಸಿದಳು: "ಈ ಮನುಷ್ಯ ಸಮುದ್ರಕ್ಕೆ ಬಿದ್ದು ಏಳುದಿನವಾದಂತಿದೆ. ಈತನೇನಾದರೂ ಸತ್ತರೆ, ಇಂತಹ ಶೀಲವಂತ ಬ್ರಾಹ್ಮಣ ಸಂಖ ಅದು ಬೋಧಿಸತ್ವನನ್ನು ಉಳಿಸಿಲ್ಲ ಎಂಬ ನಿಂದನೆ ನನಗೆ ಬರುವುದು". ತಕ್ಷಣ ಆಕೆ ಬುಟ್ಟಿ ತುಂಬಾ ಹಣ್ಣುಗಳು, ತಿಂಡಿಗಳು ಮತ್ತು ಆಹಾರವನ್ನು ತೆಗೆದುಕೊಂಡು ಆಕಾಶ ಮಧ್ಯದಲ್ಲಿ ನಿಂತು ಬೋಧಿಸತ್ವರಿಗೆ ಹೀಗೆ ಹೇಳಿದಳು:

"ಏಳು ದಿನಗಳಿಂದ ನಿನಗೆ ಯಾವ ಆಹಾರವೂ ಸಿಕ್ಕಿಲ್ಲ. ದಯಮಾಡಿ ಇದನ್ನು ತೆಗೆದುಕೋ ತಿನ್ನು". ಆದರೆ ಸಂಖಾ ಬೋಧಿಸತ್ವರು ಉಪೋಸಥವನ್ನು ಆಚರಿಸುತ್ತಿದ್ದುದರಿಂದ ಅವರು ಅದನ್ನು ಭಂಗ ಮಾಡಲು



ಇಷ್ಟಪಡಲಿಲ್ಲ. ಅದರ ಪ್ರಕಾರ ಮಧ್ಯಾಹ್ನದ ನಂತರ ಆಹಾರ ಏನನ್ನೂ ಸ್ವೀಕರಿಸುವಂತಿಲ್ಲ. ಆ ದೇವಿಯು ಬೋಧಿಸತ್ವರಿಗೆ ಮಾತ್ರ ಕಾಣಿಸುತ್ತಿದ್ದಳು. ತೇಲುತ್ತಿದ್ದ ಸಂಖಾರವರು ಆಕೆಯತ್ತ ನೋಡಿ ಹೀಗೆ ಹೇಳಿದರು: "ದಯವಿಟ್ಟು ನಿನ್ನ ಆಹಾರವನ್ನು ಹಿಂತೆಗೆದುಕೋ, ಏಕೆಂದರೆ ನಾನು ಉಪೋಸಥ ವ್ರತದಲ್ಲಿದ್ದೇನೆ."

ಆಗ ಅವರ ಹಿಂದೆ ಈಜುತ್ತಿದ್ದ ಸೇವಕನಿಗೆ ದೇವಿಯ ಧ್ವನಿಯಾಗಲಿ, ದೇವಿಯಾಗಲಿ ಕಾಣುತ್ತಿರಲಿಲ್ಲ. ಆತನು ಕೇವಲ ಬೋಧಿಸತ್ವರ ಧ್ವನಿಯನ್ನು ಆಲಿಸಿ ಹೀಗೆ ಯೋಚಿಸಿದನು: "ನೋಡಿ! ಈತನು ತನಗೆ ತಾನೇ ಮಾತಾಡಿಕೊಳ್ಳುತ್ತಿದ್ದಾನೆ. ಅಪಾರ ನೋವು ಮತ್ತು ಮರಣ ಭಯವು ಈತನಿಗೆ ಮನದ ನಿಯಂತ್ರಣ ತಪ್ಪಿಸಿರಬೇಕು. ನಾನು ಈತನಿಗೆ ಸಮಾಧಾನಿಸುವೆ." ಆತನು ಹೀಗೆ ಹೇಳಿದನು: "ಸ್ವಾಮಿಯೇ, ಇಲ್ಲಿ ನನ್ನ ಹೊರತು ಬೇರ್‍ಯಾರೂ ಇಲ್ಲ. ನೀವೇನು ಹೇಳುತ್ತಿರುವಿರಿ." ಆಗ ಬ್ರಾಹ್ಮಣ ಸಂಖಾರವರು ಹೀಗೆ ಹೇಳಿದರು: "ಇಲ್ಲಿ ನಾನು ನಿನ್ನೊಂದಿಗೆ ಮಾತನಾಡುತ್ತಿಲ್ಲ, ಹಾಗೆಯೇ ಮರಣ ಭಯದಿಂದ ಏನೇನ್ನನೋ ನುಡಿಯುತ್ತಿಲ್ಲ. ಇಲ್ಲಿ ದೇವಿಯೊಂದಿಗೆ ಸಂಭಾಷಿಸುತ್ತಿರುವೆನು" ಎಂದು ಹೇಳಿ ವಿಷಯವನ್ನು ವಿವರಿಸಿದರು.

ಈಗ ದೇವಿ ಮಣಿಮೇಖಲಳು ಬೋಧಿಸತ್ವರಿಗೆ ಹೀಗೆ ಹೇಳಿದಳು: "ನಾನು ಹೃತ್ಪೂರ್ವಕವಾಗಿ ದಯೆಭರಿತಳಾಗಿ ಈ ದುರಂತದಿಂದ ನಿನಗೆ ಕಾಪಾಡಲು ಬಂದಿಹೆನು". ಆಗ ಸಂಖಾರವರು ಹೀಗೆ ಯೋಚಿಸಿದರು: 'ಈಕೆ ನನ್ನನ್ನು ಕಾಪಾಡಲು ಬಂದಿರುವುದು ನನ್ನ ಸದ್ಗುಣವನ್ನು ಕಂಡೋ ಅಥವಾ ಕೇವಲ ದಯೆಯಿಂದ ಪ್ರೇರಿತಳಾಗಿಯೋ?' ಹೀಗೆ ಯೋಚಿಸುತ್ತಾ ಅವರು ಆಕೆಯನ್ನು ಹೀಗೆ ಪ್ರಶ್ನಿಸಿದರು: "ಪೂಜ್ಯ ದೇವಿಯೇ, ನಾನು ಮಾಡಿದ ಯಾವ ಸತ್ಕಾರ್ಯವನ್ನು ಕಂಡು ನನ್ನಲ್ಲಿಗೆ ಸಹಾಯ ಮಾಡಲು ಈ ದುಃಸ್ಥಿತಿಯಲ್ಲಿರುವಾಗ ಬಂದಿರುವೆ". ಆಗ ಆ ದೇವಿಯು ಹೀಗೆ ಉತ್ತರಿಸಿದಳು: "ಬ್ರಾಹ್ಮಣನೇ, ಯಾವಾಗ ಪವಿತ್ರರಾದ ಪಚ್ಚೇಕ ಬುದ್ಧರು ಉರಿಬಿಸಿಲಿನಲ್ಲಿ ನಡೆಯುವಾಗ ಅವರಿಗೆ ಮನೆಗೆ ಕರೆತಂದು

ಸತ್ಕರಿಸಿದೆಯಲ್ಲಾ ಆ ಉದಾತ್ತ ಕರ್ಮವೇ ನಿನಗೆ ಈಗ ಕಾಮಧೇನುವಾಗಿದೆ. ಹೀಗಾಗಿ ನಿನ್ನಲ್ಲಿಗೆ ನಾನು ಬಂದಿರುವೆ". ಆಗ ಸಂಖಾರವರು ಮೇಲಿನ ನಗರಕ್ಕೆ ಸೇರಲು ಬೇಕಾದುದೆಲ್ಲವನ್ನು ಕೇಳಿದರು.

ಆಗ ದೇವಿಯು ತನ್ನ ಅತಿಮಾನಸ ಬಲದಿಂದಾಗಿ ಹಡಗೊಂದನ್ನು ಸೃಷ್ಟಿಸಿ ಅದರಲ್ಲಿ ಎಲ್ಲಾಬಗೆಯ ಅಮೂಲ್ಯ ವಸ್ತುಗಳೆಲ್ಲ ತುಂಬಿಸಿ, ಹಡಗನ್ನು ಏರಲು ಆಹ್ವಾನಿಸಿದಳು. ಆದರೆ ಆಕೆಯು ಸೇವಕನನ್ನು ನೋಡಲೇ ಇಲ್ಲ. ಹೀಗಾಗಿ ಆಕೆ ಬೋಧಿಸತ್ವನಿಗೆ ಮಾತ್ರ ಆಹ್ವಾನಿಸಿದಳು. ವರ್ತಕನೊಂದಿಗೆ ಸೇವಕ ಹಡಗನ್ನು ಹತ್ತಲು ಹೋದಾಗ ಆತನಿಗೆ ನಿರಾಕರಿಸಲಾಯಿತು. ಆಗ ಬೋಧಿಸತ್ವರು ತಮ್ಮೆಲ್ಲಾ ಪುಣ್ಯವನ್ನು ಸೇವಕನಿಗೆ ಹಂಚಿದಾಗ, ಸೇವಕನಿಗೆ ಹಡಗಿನಲ್ಲಿ ಪ್ರವೇಶ ದೊರೆಯಿತು. ಹೀಗೆ ಇಬ್ಬರೂ ತಮ್ಮ ಗುರಿ ತಲುಪಿದರು.

ಈಗ ಬೋಧಿಸತ್ವ ಸಂಖಾರವರು ಇಡೀ ಜೀವನ ಕಾಲ ಮನೆಯಲ್ಲೇ ಕಾಲಕಳೆದರು. ಹೇಗೆಂದರೆ ಸದಾಕಾಲ ದಾನ ಮಾಡುತ್ತ ಆಹಾರ, ವಸ್ತ್ರ ಮತ್ತು ಇನ್ನಿತರ ವಸ್ತುಗಳನ್ನು ಭೇಟಿ ನೀಡಿದವರಿಗೆ ಹರಸುತ್ತ, ಭಿಕ್ಷುಗಳಿಗೆ, ಸನ್ಯಾಸಿಗಳಿಗೆ, ಭಿಕ್ಷುಕರಿಗೆ, ದಾರಿಹೋಕರಿಗೆ ದಾನ ಮಾಡುತ್ತ ಅವರಿಗೆ ಒಳಿತನ್ನು ಮಾಡಿದರು. ಯಾರು ಏನೇ ಕೇಳಿದರೂ ಆನಂದದಿಂದ ನೀಡುತ್ತಿದ್ದರು. ಹಾಗೆಯೇ ಅವರು ಶೀಲಗಳನ್ನು ನಿಷ್ಠೆಯಿಂದ ಪಾಲಿಸುತ್ತಿದ್ದರು ಮತ್ತು ಧಮ್ಮ ಜೀವನದಲ್ಲೇ ಜೀವನ ಕಳೆದರು. ಮುಂದೆ ಅವರು ದಿವ್ಯವಾದ ಕ್ಷೇತ್ರದಲ್ಲಿ (ಬ್ರಹ್ಮಲೋಕದಲ್ಲಿ) ಜನಿಸಿದರು.

ನಂತರ ಭಗವಾನರು ಈ ಜಾತಕ ವಿಸ್ತಾರದ ನಂತರ ಅಲ್ಲಿ ಬರುವ ಪಾತ್ರಗಳನ್ನು ಹೀಗೆ ಗುರುತಿಸಿದರು. ಈಗಿನ ಉತ್ಪಲಾವರ್ಣ ಆಗ ಮಣಿಮೆಖಲೆಯಾಗಿದ್ದಳು. ಆನಂದ ಆಗ ನನ್ನ ಸೇವಕನಾಗಿದ್ದನು ಮತ್ತು ಬ್ರಾಹ್ಮಣ ಸಂಖಾ ನಾನೇ ಆಗಿದ್ದೆ.

ಯಾವಾಗ ಉಪಾಸಕ ಈ ಸುತ್ತವನ್ನು ಕೇಳಿದನೋ ಆಗ ಆನಂದ ಹಾಗೂ ಪ್ರಜ್ಞಾಭರಿತನಾಗಿ ಸೋತಾಪನ್ನ ಫಲವನ್ನು ಪಡೆದನು. ನಿಬ್ಬಾಣದ ಹೊಳೆಗೆ ಪ್ರವೇಶಿಸುವವರಲ್ಲಿ ಒಬ್ಬನಾದನು.



# ಪುಣ್ಯವನ್ನು ಹಂಚಿಕೊಳ್ಳುವಿಕೆ

ಬುದ್ಧ ಭಗವಾನರು ಶ್ರಾವಸ್ತಿಯಲ್ಲಿ ಜೇತವನದ ಅನಾಥಪಿಂಡಿಕನ ವಿಹಾರದಲ್ಲಿ ತಂಗಿದ್ದರು. ಭಗವಾನರು ಯಾವಾಗಲೇ ಆಗಲಿ ಈ ವಿಹಾರದಲ್ಲಿ ತಂಗಿರುವಾಗ ಅವರು ಸಂಜೆಯ ವೇಳೆ ಬೋಧನೆಯನ್ನು ತಪ್ಪದೆ ನೀಡುತ್ತಿದ್ದರು. ಒಮ್ಮೆ ಅವರು ಶೀಲವಂತ ಒಡನಾಟದ ಲಾಭಗಳ ಬಗ್ಗೆ ಪ್ರವಚನ ನೀಡಿದರು (ಸೀಲಾನಿಮಾಂಸ).

ಆ ಸಮಯದಲ್ಲಿ ಆರ್ಯ ಉಪಾಸಕನು ಅಂದರೆ ಸೋತಪನ್ನ ನಾಗಿರುವಂತಹ ಸುಶೀಲನು ಹಾಗು ಪ್ರಜ್ಞಾವಂತನು ಆತನು ಆತುರದಿಂದ ಭಗವಾನರು ಬೋಧಿಸುತ್ತಿದ್ದ ಧಮ್ಮ ಸಭಾಂಗಣಕ್ಕೆ ಬಂದನು. ಭಗವಾನರಿಗೆ ಆತನು ನಿಧಾನವಾಗಿ ಏತಕ್ಕೆ ಬಂದಿರುವನೆಂದು ತಿಳಿದಿತ್ತು. ಆ ಉಪಾಸಕನು ಭಗವಾನರ ಮುಂದೆ ಒಂದು ಪಕ್ಕದಲ್ಲಿ ಕುಳಿತಾಗ, ಆತನಿಗೆ ಸಮಾಧಾನಿಸಲೆಂದು ಭಗವಾನರು ಹೀಗೆ ಕೇಳಿದರು "ಓ ಉಪಾಸಕ, ಈಗ ಎಲ್ಲವೂ ಸರಿಯಾಗಿದೆ ಅಲ್ಲವೆ, ನಿನಗೆ ಯಾವ ವಿಪತ್ತೂ ಬಂದಿಲ್ಲವಷ್ಟೇ?"

ಆಗ ಆ ಉಪಾಸಕನು ತನ್ನ ಘಟನೆಗಳನ್ನು ಹೀಗೆ ವಿವರಿಸಿದನು "ಭಗವಾನ್, ನಾನು ಅಚಿರಾವತಿ ನದಿಯ ಇನ್ನೊಂದು ಬದಿಯಿಂದ ಬರುತ್ತಿದ್ದೆನು ನಾನು ಅಲ್ಲಿನ ದಡದಲ್ಲಿ ದೋಣಿಗಾಗಿ ಕಾಯುತ್ತಿದ್ದೆನು, ಆದರೆ ಯಾವುದೂ ದೊರೆಯಲಿಲ್ಲ. ಆಗ ಆನು ಬುದ್ಧನುಸ್ಸತಿಯಲ್ಲಿ, ತಮ್ಮದೇ ಸದ್ಗುಣಗಳ ಧ್ಯಾನದಲ್ಲಿ ತಲ್ಲೀನನಾದೆನು. ಆಗ ಅಂಬಿಗರು ಏನೋ ಕೆಲಸದ ಮೇಲೆ ಇನ್ನೊಂದು ದಡಕ್ಕೆ ಹೊರಟಿದ್ದರು. ನನ್ನ ಮನಸ್ಸು ಭಗವಾನರ ಮೇಲೆ ತಲ್ಲೀನವಾಗಿ ಆನಂದಭರಿತನಾದೆನು. ನಾನು ಸ್ವಯಂಪ್ರೇರಿತನಾಗಿ ನದಿಯಲ್ಲಿ ನಡೆದೆನು. ಪೀತಿಯಿಂದ (ಆನಂದದಿಂದ)

ನನ್ನ ಮನಸ್ಸು ತುಂಬಿದ್ದರಿಂದಾಗಿ ನನ್ನ ಪಾದಗಳು ಮುಳುಗಲಿಲ್ಲ. ಹೀಗೆ ನದಿಯ ಮಧ್ಯದವರೆಗೂ ನಾನು ಒಣನೆಲದ ಮೇಲೆ ನಡೆದಂತೆ ನಡೆದೆನು.

ಆಗ ನದಿಯ ಮಧ್ಯದಲ್ಲಿ ಏನೋ ಆಯಿತು. ನಾನು ಅಲೆಗಳನ್ನು ಕಂಡೆನು. ಮನಸ್ಸು ಸ್ವಲ್ಪ ಚದುರಿತು. ಆಗ ಸಮಾಧಿಯ ಅನುಭೂತಿಯು ತಗ್ಗಿದಂತಾಯಿತು. ನನ್ನ ಪಾದಗಳು ಮುಳುಗಲು ಆರಂಭವಾಯಿತು. ತಕ್ಷಣ ನಾನು ಜಾಗೃತನಾಗಿ ಶ್ರದ್ಧೆಯನ್ನು ಸ್ಥಿರಮಾಡಿ, ಸಂಕಲ್ಪಿಸಿ, ಪುನಃ ಭಕ್ತಿಯಿಂದ ಬುದ್ಧಾನುಸ್ಮೃತಿಯಲ್ಲಿ ತಲ್ಲೀನನಾದೆನು. ಮತ್ತೆ ಆ ದಿವ್ಯ ಸಮಾಧಿಯಲ್ಲಿ ಮನಸ್ಸನ್ನು ತಂದೆನು. ಆಗ ಮತ್ತೆ ನಾನು ನೀರಿನಲ್ಲಿ ನಡೆಯುವಂತಾಯಿತು. ಹೀಗೆಯೇ ನೀರಿನಲ್ಲಿ ನಡೆಯುತ್ತ ನಾನು ಜೇತವನಕ್ಕೆ ಬರಲು ಸ್ವಲ್ಪ ತಡವಾಯಿತು ಭಗವಾನ್. ಇದಿಷ್ಟೂ ನನ್ನ ಘಟನೆಯಾಗಿದೆ."

"ನಿಜಕ್ಕೂ ಉಪಾಸಕ, ನೀನು ಯೋಗ್ಯವಾದುದನ್ನೇ ಮಾಡಿರುವೆ" ಎಂದು ಭಗವಾನರು ನುಡಿದು ಹೀಗೆ ಮುಂದುವರೆಸಿದರು. "ಬುದ್ಧಾನುಸ್ಸತಿಯಿಂದ ತಮ್ಮ ಗಮ್ಯವನ್ನು ಸುರಕ್ಷಿತವಾಗಿ ಸೇರಿದವರಲ್ಲಿ ನೀನು ಒಬ್ಬನೇ ಅಲ್ಲ." (ಬುದ್ಧಾನುಸತಿ ಎಂದರೆ ಬುದ್ಧ ಭಗವಾನರ ಸದ್ಗುಣಗಳ ಚಿಂತನೆಯನ್ನು – ಅವರು ಹೀಗಿದ್ದರು... ದೇವ ಮನುಷ್ಯರಿಗೆ ಗುರುವಾಗಿದ್ದರು... ಎಂದು ಮಾಡುವುದಾಗಿದೆ).

ಆಗ ಆ ಉಪಾಸಕನು ಬುದ್ಧ ಭಗವಾನರಿಗೆ ಆ ಹಿಂದಿನ ಘಟನೆಯನ್ನು ವಿವರಿಸುವಂತೆ ಕೇಳಿಕೊಂಡಾಗ ಭಗವಾನರು ತಾವು ಬೋಧಿಸತ್ವರಾಗಿದ್ದಾಗ ನಡೆದ ಘಟನೆ ಹೀಗೆ ವಿವರಿಸಿದರು.

ಆಗ ಕಸ್ಸಪರು ಬುದ್ಧ ಭಗವಾನರಾಗಿದ್ದು, ಬೋಧಿಸತ್ವರು ಸಮುದ್ರ ದೇವರಾಗಿದ್ದರು. ಆ ಸಮಯದಲ್ಲಿ ಶ್ರದ್ಧಾಳು ಉಪಾಸಕನು ಕಸ್ಸಪ ಬುದ್ಧ ಭಗವಾನರ ಬೋಧನೆ ಆಲಿಸಿ ಸೋತಪನ್ನನಾಗಿದ್ದನು. ಆತನು ವ್ಯಾಪಾರಿಯಾಗಿದ್ದು ಸರಕುಗಳನ್ನು ರಫ್ತು ಮಾಡುತ್ತಿದ್ದನು ಮತ್ತು ಅಲ್ಲಿನ ವಸ್ತುಗಳನ್ನು ಇಲ್ಲಿ ಆಮದು ಮಾಡುತ್ತಿದ್ದನು. ಆತನಲ್ಲಿ ದೊಡ್ಡ ಹಡಗು



ಸಹಾ ಇತ್ತು. ಅದರಿಂದಲೇ ಆತನು ದೇಶ-ವಿದೇಶಗಳಲ್ಲಿ ಸರಕುಗಳನ್ನು ಮಾರಿ, ಇಲ್ಲಿಂದ ಅಲ್ಲಿ, ಅಲ್ಲಿಂದ ಇಲ್ಲಿ ವ್ಯಾಪಾರ ಮಾಡುತ್ತಿದ್ದನು.

ಒಮ್ಮೆ ಆತನು ತನ್ನ ಹಡಗಿನ ತುಂಬಾ ಸರಕುಗಳನ್ನು ತುಂಬಿ ಪೂರ್ವ ಬಂದರಿನಿಂದ ಪ್ರಯಾಣ ಮಾಡಿದನು. ಆತನ ಜೊತೆಗೆ ಒಬ್ಬ ಉದ್ಯೋಗಿಯು ಸಹ ಇದ್ದನು. ಆತನು ಕ್ಷೌರಿಕನಾಗಿದ್ದನು ಮತ್ತು ಸಹಾಯಕನೂ ಸಹ ಆಗಿದ್ದನು. ಆ ಹಡಗು ಏಳು ದಿನಗಳ ಕಾಲ ತೆರೆದ ಆಕಾಶದಲ್ಲಿ ನಿರಾತಂಕವಾಗಿ ಚಲಿಸಿತು. ನಂತರ ಭಯಾನಕ ಚಂಡಮಾರುತವು ಮಧ್ಯದ ಸಮುದ್ರದಲ್ಲಿ ಎದ್ದಿತು. ಆತನ ಹಡಗು ಪೂರ್ಣವಾಗಿ ನಾಶವಾಯಿತು. ಆದರೂ ಮುರಿದ ಹಲಗೆಯನ್ನು ಅಪ್ಪಿಕೊಂಡು ಆತನು ಮತ್ತು ಆತನ ಸೇವಕ ದ್ವೀಪವನ್ನು ನಿರೀಕ್ಷಿಸುತ್ತ ಈಜುತ್ತಾ, ತೇಲುತ್ತಾ ಸಾಗಿದರು.

ಸಮುದ್ರದಲ್ಲಿ ತೇಲುತ್ತ ಹೀಗೆಯೇ ಏಳುದಿನ ಕಳೆದರೂ ಅವರಿಗೆ ತಿನ್ನಲು ಏನೂ ದೊರೆಯಲಿಲ್ಲ. ಇಬ್ಬರೂ ಸಹ ಅಪಾರ ದಣಿದಿದ್ದರು, ಹಾಗು ಹಸಿವಿನಿಂದ ಕೂಡಿದ್ದರು. ಕೊನೆಗೆ ಅವರಿಗೆ ದ್ವೀಪವು ದೊರಕಿತು. ಅಲ್ಲಿ ಇಳಿದ ಉಪಾಸಕ ಹೀಗೆ ಯೋಚಿಸಿದನು: "ಇಂತಹ ದುಃಖಭರಿತ ಸ್ಥಿತಿಯಲ್ಲಿ ನಾನು ಬುದ್ಧರ ಹೊರತು ಬೇರ್‍ಯಾರಲ್ಲೂ ಅವಲಂಬಿತನಾಗಲಾರೆ. ಆದ್ದರಿಂದ ನಾನು ಬುದ್ಧ ಅನುಸ್ಸತಿಯಲ್ಲಿ ತೊಡಗುವೆ. ಅವರ ಲೋಕೋತ್ತರ ಸದ್ಗುಣಗಳು ಮತ್ತು ಅವರ ಅತೀಂದ್ರಿಯ ಬಲಗಳೇ ನಮ್ಮನ್ನು ಈ ದುಃಸ್ಥಿತಿಯಿಂದ ಕಾಪಾಡಬಲ್ಲದು."

ಆದರೆ ಕ್ಷೌರಿಕರಿಗೆ ಬೇರೆಯೇ ಉಪಾಯ ಹೊಳೆದಿತ್ತು. ಆತನು ಪೊದೆಗಳಲ್ಲಿ ಅಡ್ಡಾಡಿ, ಕೆಲವು ಕಲ್ಲುಗಳನ್ನು ಬಳಿಸಿ, ಕೆಲವು ಪಕ್ಷಿಗಳನ್ನು ಕೊಂದನು. ನಂತರ ಅಲ್ಲಿದ್ದ ಹೇರಳವಾದ ಒಣ ಎಲೆಗಳನ್ನು ಮತ್ತು ಕೊಂಬೆಗಳನ್ನು ಸೇರಿಸಿ ಗಟ್ಟಿಮರಗಳನ್ನು ಉಜ್ಜಿ ಬೆಂಕಿ ಹಚ್ಚಿ, ನಂತರ ಆತನು ರೆಕ್ಕೆಪುಕ್ಕಗಳನ್ನು ತೆಗೆದುಹಾಕಿ, ಪಕ್ಷಿಗಳನ್ನು ಸುಟ್ಟು, ಆಹಾರ ತಯಾರಿಸುತ್ತಾನೆ. ಆತನು ತನ್ನ ಯಜಮಾನನಿಗೆ ನಿಷ್ಠನಾಗಿರುತ್ತಾನೆ,

ಆದ್ದರಿಂದಾಗಿ ಆತನು ಯಜಮಾನರ ಬಳಿಗೆ ಬಂದು ಆಹಾರ ಸಿದ್ಧವಾಗಿದೆ ಎಂದು ಹೇಳಿ ಸುಟ್ಟ ಪಕ್ಷಿಗಳನ್ನು ತಿನ್ನಲು ನೀಡುತ್ತಾನೆ. ಆದರೆ ಆ ಉದಾತ್ತ ಉಪಾಸಕರು ಅದನ್ನು ತಿನ್ನುವುದಿರಲಿ, ಅದನ್ನು ಮುಟ್ಟುವುದೂ ಇಲ್ಲ. "ಅಂತಹುದನ್ನು ನಾನು ಹೊಂದಲಾರೆ" ಎನ್ನುತ್ತಾರೆ. ನಂತರ ಬುದ್ಧರ ಅನುಸ್ಸತಿಯಲ್ಲಿ ತೊಡಗುತ್ತಾರೆ.

ಅದೇ ದ್ವೀಪದಲ್ಲಿ ಶಕ್ತಿಶಾಲಿ ನಾಗರಾಜನು ಇರುತ್ತಾರೆ. ಆತನು ದಿವ್ಯವಾದ ಸರಿಸೃಪವಾಗಿರುತ್ತಾನೆ. (ಈ ದಿವ್ಯ ನಾಗಗಳು ವಿಶೇಷ ಅತೀಂದ್ರಿಯ ಶಕ್ತಿಯನ್ನು ಪಡೆದಿರುತ್ತವೆ). ಆತನು ಉಪಾಸಕ ಏನೆಲ್ಲಾ ಮಾಡುತ್ತಿದ್ದನೋ ಅದೆಲ್ಲವನ್ನು ಗಮನಿಸಿಯೇ ಇರುತ್ತಾರೆ. ಕ್ಷೌರಿಕ ತಂದ ಮಾಂಸವನ್ನು ತಿನ್ನಲು ನಿರಾಕರಿಸಿದ್ದು ಸಹಾ ನಾಗರಾಜನಿಗೆ ಇಷ್ಟವಾಯಿತು. ಇವೆಲ್ಲಕ್ಕಿಂತ ಹೆಚ್ಚಾಗಿ ಆ ಶ್ರದ್ಧೋಪಾಸಕನು ಬುದ್ಧರನ್ನು ಧ್ಯಾನಿಸುವಂತಹ ಧ್ಯಾನವಾದ 'ಬುದ್ಧಾನುಸತಿ'ಯಲ್ಲಿ ತೊಡಗಿದಾಗ ಆತನಿಗೆ ಪರಮಾನಂದವಾಯಿತು. ಹೀಗಾಗಿ ಆ ನಾಗರಾಜನು ಉಪಾಸಕನಿಗೆ ತನ್ನ ಅತೀಂದ್ರಿಯ ಬಲದಿಂದಾಗಿ ಸಹಾಯ ಮಾಡಲು ನಿರ್ಧರಿಸುತ್ತಾನೆ. ಹೀಗಾಗಿ ಆತನು ಚಿತ್ತಶಕ್ತಿಯಿಂದಾಗಿ ದೊಡ್ಡ ಹಡಗೊಂದನ್ನು ಸೃಷ್ಟಿಸುತ್ತಾನೆ ಮತ್ತು ಅದರ ತುಂಬೆಲ್ಲಾ ನಾನಾರೀತಿಯ ಅತ್ಯಮೂಲ್ಯ ರತ್ನಗಳಿಂದ ತುಂಬಿಸುತ್ತಾನೆ.

ನಂತರ ಆ ನಾಗರಾಜನು ತನ್ನ ಮಿತ್ರನಾದ ಸಮುದ್ರ ದೇವರನ್ನು ಭೇಟಿಯಾಗಿ, ಆತನಿಗೆ ಹಡಗಿನ ನಾವಿಕನಾಗುವಂತೆ ಕೇಳಿಕೊಳ್ಳುತ್ತಾನೆ. ಆಗ ಸಮುದ್ರದೇವತೆಯು ಒಪ್ಪಿದಾಗ ಇಬ್ಬರೂ ಉಪಾಸಕನಿಗೆ ಅಲ್ಲಿಂದ ಹೊರಡಲು ಅನುಕೂಲವಾಗುವಂತೆ ಸಹಾಯ ಮಾಡಲು ನಿರ್ಧರಿಸುತ್ತಾರೆ. ಅವರು ಉಪಾಸಕನನ್ನು ಭೇಟಿಯಾದಾಗ ಅವರಿಗೆ ತನ್ನ ಹಡಗು ನಾಶವಾದ ಬಗೆಯನ್ನು ಹೇಳುತ್ತಾನೆ. ಆಗ ಅವರನ್ನು ಸಮಾಧಾನಿಸಿದ ನಾಗರಾಜ ಹೀಗೆ ಹೇಳುತ್ತಾನೆ: "ನಿಮಗಾಗಿಯೇ ಒಂದು ದೊಡ್ಡ ಹಡಗನ್ನು ಸಿದ್ಧಪಡಿಸಿದ್ದೇನೆ. ನೀವು ಎಲ್ಲಿ ಹೋಗಬೇಕು ಹೇಳಿ." ಆಗ ಉಪಾಸಕರು



"ನಾನು ಬನಾರಸ್ ವಾಸಿ, ಭಾರತದವನು". ಆಗ ನಾಗರಾಜ ಹೀಗೆ ಹೇಳುತ್ತಾನೆ: "ನಾವು ಸಹಾ ಭಾರತದೆಡೆಗೆ ಹೋಗುತ್ತಿದ್ದೇವೆ, ಹೀಗಾಗಿ ನೀವು ನಮ್ಮೊಡನೆ ಬರಬೇಕು."

ಆಗ ಉಪಾಸಕನು ಅಲ್ಲೇ ಹತ್ತಿರದಲ್ಲಿದ್ದ ಕ್ಷೌರಿಕನಿಗೆ ಕರೆಯುತ್ತಾನೆ. ಆಗ ನಾವಿಕನ ವೇಶದಲ್ಲಿದ್ದ ಸಮುದ್ರ ದೇವರು ಹೀಗೆ ನುಡಿದರು: "ಇಲ್ಲ, ಆತನು ಬರಲು ಅನುಮತಿಯಿಲ್ಲ, ನೀವು ಮಾತ್ರ ಬರಬೇಕು". ಆಗ ಉಪಾಸಕರು "ಆತನೇಕೆ ಬರಲಾರ" ಎಂದು ಪ್ರಶ್ನಿಸಿದಾಗ ಅವರು ಅದಕ್ಕೆ ಹೀಗೆ ಉತ್ತರಿಸಿದರು "ಆತನು ಧಾರ್ಮಿಕ ವ್ಯಕ್ತಿಯಲ್ಲ, ಪುಣ್ಯರಹಿತನಾಗಿದ್ದಾನೆ. ಆದ್ದರಿಂದಲೇ ನಿಮಗಾಗಿಯೇ ಪ್ರವೇಶ, ಆತನಿಗಿಲ್ಲ". ಆಗ ಅದನ್ನು ಆಲಿಸಿದ ಉಪಾಸಕರು ಹೀಗೆ ಅಧಿಷ್ಠಾನ (ದೃಢಸಂಕಲ್ಪ) ಮಾಡಿದರು. "ನಾನು ಮಾಡಿದ ಎಲ್ಲಾ ದಾನಗಳ ಫಲವಾಗಿ, ನಾನು ಪಾಲಿಸಿದ ಶೀಲಾಚರಣೆಗಳ ಫಲವಾಗಿ ಮತ್ತು ನಾನು ಅಭ್ಯಸಿಸಿದ ಧ್ಯಾನಗಳ ಫಲವಾಗಿ, ಏನೆಲ್ಲ ಪುಣ್ಯ ಗಳಿಕೆಯಾಗಿದೆಯೋ ಅವೆಲ್ಲಾ ಪುಣ್ಯರಾಶಿಯನ್ನು ನಾನು ಈತನ ಒಳಿತಿಗಾಗಿ ವರ್ಗಾಯಿಸುತ್ತಿದ್ದೇನೆ. ಈ ಪುಣ್ಯ ಗಳಿಕೆಯಿಂದಾಗಿ ಈತನು ಲಾಭ ಪಡೆಯುವಂತಾಗಲಿ". ಅದನ್ನು ಆಲಿಸಿದ ಕ್ಷೌರಿಕನು ಕೃತಜ್ಞತಾಪೂರ್ವಕವಾಗಿ "ಸಾಧು! ಸಾಧು! ಸಾಧು!" ಎಂದು ಧನ್ಯವಾದ ಸಲ್ಲಿಸಿದನು.

ಇದನ್ನೆಲ್ಲಾ ಗಮನಿಸಿದ ಸಮುದ್ರದೇವ ಹೀಗೆ ನುಡಿದರು: "ಈಗ ಈತನನ್ನು ಸಹಾ ಗಮ್ಯಸ್ಥಾನಕ್ಕೆ ಕರೆದೊಯ್ಯುವೆ". ಹೀಗಾಗಿ ಇಬ್ಬರೂ ಸಹಾ ಹಡಗಿನಲ್ಲಿ ಕುಳಿತರು. ಆ ಹಡಗು ಭಾರತದತ್ತ ಸಾಗಿ ಬನಾರಸ್ ತಲುಪಿತು.

ಆ ನಗರವನ್ನು ತಲುಪಿದ ನಂತರ ಸಮುದ್ರದೇವರು ಆ ಉಪಾಸಕನಿಗೆ ಆ ಧನ-ಐಶ್ವರ್ಯವನ್ನು ಸೃಷ್ಟಿಸಿ ನೀಡಿದರು. ಆ ಶ್ರದ್ಧೋಪಾಸಕ ಅದನ್ನು ಸಹಾ ಕ್ಷೌರಿಕನಲ್ಲಿ ಹಂಚಿಕೊಂಡನು. ಆಗ ಸಮುದ್ರದೇವತೆಯು ಜ್ಞಾನಿಗಳೊಂದಿಗೆ ಬೆರೆಯುವಿಕೆ ಹಾಗು ಸತ್ಪುರುಷರೊಂದಿಗೆ

ಬೆರೆಯುವುದರಿಂದಾಗಿ ಉಂಟಾಗುವ ಲಾಭವನ್ನು ಈ ಗಾಥೆಯಿಂದ ಹೀಗೆ ನುಡಿಯಿತು: "ದಾನ, ಶೀಲ ಮತ್ತು ಧಮ್ಮ ಜೀವನದ ಫಲವನ್ನು ಇಲ್ಲಿ ಗಮನಿಸಿ. ಇದರ ಪ್ರಭಾವದಿಂದಾಗಿ ಮಹಾನ್ ನಾಗರಿಕರು ಸಹಾ ಬೃಹತ್ ಹಡಗನ್ನು ನಿರ್ಮಿಸಿ, ಬುದ್ಧ ಭಗವಾನರ ಉಪಾಸಕನನ್ನು ಸಾಗರದಾಚೆ ದಾಟಿಸಿದನು. ಆದ್ದರಿಂದಾಗಿ ಎಲ್ಲಾ ಜನರು ಜ್ಞಾನಿಯು ಮತ್ತು ಒಳ್ಳೆಯವರ ಜೊತೆ ಮಿತ್ರತ್ವವನ್ನು ಬೆಳೆಸಲಿ. ನೋಡಿ, ಸತ್ಪುರುಷರ ಸ್ನೇಹದಿಂದಾಗಿ ಕ್ಷೌರಿಕನು ಹೇಗೆ ಸುರಕ್ಷಿತವಾಗಿ ಮನೆಗೆ ಹಿಂತಿರುಗಿದನು.

ಅನಂತರ ಸಮುದ್ರದೇವ ಮತ್ತು ನಾಗರಾಜ ಗಾಳಿಯಲ್ಲಿ ಮೇಲೆದ್ದು ಮಧ್ಯ ಆಕಾಶದಲ್ಲಿ ನಿಂತು ಆ ಉತ್ತಮ ಉಪಾಸಕನಿಗೆ ಮತ್ತು ಕ್ಷೌರಿಕನಿಗೆ ವಿದಾಯ ಹೇಳಿದರು. ಆ ಸಮಯದಲ್ಲಿ ಸಮುದ್ರ ದೇವರ ಬುದ್ಧಿವಾದ ಕೇಳಿ ಆ ಉತ್ತಮ ಉಪಾಸಕರಲ್ಲಿ ಮಹತ್ತರ ಪರಿವರ್ತನೆ ಆಗಿ ಸೋತಾಪನ್ನರಾಗಿದ್ದ ಆತನು ಲೋಕೋತ್ತರ ಮಾರ್ಗ ಜ್ಞಾನವು ಉಂಟಾಗಿ ಆತನು ಸಕದಾಗಾಮಿಯಾದನು.

ಕೊನೆಗೆ ಭಗವಾನರು ಆ ಹಿಂದಿನ ಜಾತಕ (ಜನ್ಮ)ದಲ್ಲಿದ್ದ ವ್ಯಕ್ತಿಗಳ ಪರಿಚಯ ಹೀಗೆ ಮಾಡಿದರು "ಆಗ ಸಾರಿಪುತ್ತನೇ ನಾಗರಾಜನಾಗಿದ್ದನು ಮತ್ತು ಸಮುದ್ರದೇವ ನಾನೇ ಆಗಿದ್ದೆ."

ನಾವು ತಿರಕುಡ್ಡ ಸುತ್ತದಲ್ಲಿ ಪ್ರೇತಗಳಿಗೆ ಪುಣ್ಯವನ್ನು ಹಂಚುವಿಕೆ ಅರಿತಿರುವೆವು. ಆದರೆ ಈ ಘಟನೆಯಲ್ಲಿ ನಾವು ತಿಳಿಯುವುದು ಏನೆಂದರೆ ಧಮ್ಮಪಾಲಕನಾದ ಉಪಾಸಕನು ಪರರಿಗೆ ಅಥವಾ ಪರಜೀವಿಗಳಿಗೆ ತನ್ನ ಪುಣ್ಯವನ್ನು ವರ್ಗಾಯಿಸಬಹುದಾಗಿದೆ. ಆ ಜೀವಿಗಳು ಮಾನವರು ಆಗಬಹುದು, ಅಮನುಷ್ಯರಾಗಬಹುದು ಅಥವಾ ದಿವ್ಯ ದೇವತೆ ಗಳಾಗಬಹುದು. ಇದು ಪುಣ್ಯವಂತನು ತನ್ನ ಇಚ್ಛಾಶಕ್ತಿಯಿಂದ ಅಧಿಷ್ಠಾನ ಮಾಡಿದರೆ ಸಂಭವಿಸುತ್ತದೆ.



# ಪುಣ್ಯನುಮೋದನೆಯ (ಪುಣ್ಯ ಹಂಚುವಿಕೆಯ) ತರ್ಕಾಧಾರಿತ ವಿವರಣೆ

ಬೌದ್ಧರಿಗೆ ಪುಣ್ಯಕರ್ಮವು ಅತ್ಯಂತ ಮಹತ್ವದ್ದಾಗಿದೆ. ಏಕೆಂದರೆ ಇದರಿಂದಾಗಿ ತನ್ನ ಚಿತ್ತದ ಸಂವೃದ್ಧಿಯಾಗುವುದು. ಹಾಗೆಯೇ ಅದರಲ್ಲಿ ಭಾಗವಹಿಸುವವರು ಸಹಾ, ಅದರ ಬಗ್ಗೆ ಅವರು ವಿಶಾಲವಾದ ಮತ್ತು ಆಳವಾದ ಚಿತ್ರಣದಿಂದ ಗ್ರಹಿಸುತ್ತಾರೆ. ಉದಾಹರಿಸುವುದಾದರೆ ಒಬ್ಬ ವ್ಯಕ್ತಿಯು ಭಿಕ್ಖು ಸಂಘವನ್ನು ಆಹಾರ ದಾನದ ಸಮಾರಂಭದಲ್ಲಿ ಆಹ್ವಾನಿಸುತ್ತಾನೆ. ಆ ದಾನವನ್ನು ತನ್ನ ಬಂಧುವಿನ ಹೆಸರಿನಲ್ಲಿ ಮಾಡಿಸುವೆನು, ಆ ಬಂಧುವು ಜೀವಂತವಾಗಿರಬಹುದು ಅಥವಾ ಮೃತನಾಗಿರಬಹುದು. ಆಹಾರ ದಾನವನ್ನು ಭಕ್ತಿಯಿಂದ ಸಮರ್ಪಿಸಿದ ನಂತರ ಹಾಗೂ ಆ ಆಹಾರವನ್ನು ಭಿಕ್ಖುಗಳು ಸೇವಿಸಿದ ನಂತರ ಆತನು ಪುಣ್ಯಾನುಮೋದನೆ (ಹಂಚುವಿಕೆ) ಮಾಡುತ್ತಾನೆ.

ಈ ಪ್ರಕ್ರಿಯೆಯಲ್ಲಿ ನೀರು ತುಂಬಿದ ಬಟ್ಟಲನ್ನು ತರುತ್ತಾರೆ. ನಂತರ ಇನ್ನೊಂದು ಬಟ್ಟಲಿಗೆ (ಪಾತ್ರೆಗೆ) ಅದನ್ನು ಸುರಿಯುತ್ತಾರೆ. ತನ್ನ ಬಂಧುವಿಗೆ (ಮೃತ ಅಥವಾ ಜೀವಂತ) ಪುಣ್ಯವನ್ನು ವರ್ಗಾಯಿಸುವಾಗ ಆತನು ಈ ರೀತಿಯ ಸಂಕಲ್ಪವನ್ನು ಗಂಭೀರ ಕಂಠೋಕ್ತಿಯಲ್ಲಿ ಹೀಗೆ ಹೇಳಬೇಕಾಗುತ್ತದೆ.

"ಯಾವುದೆಲ್ಲವು ಪುಣ್ಯವು ನನ್ನಿಂದ ಗಳಿಸಲಾಗಿದೆಯೋ ಅಥವಾ ನಿಮ್ಮಿಂದ ಗಳಿಸಲಾಗಿದೆಯೋ ಮತ್ತು ಈ ಆಹಾರ ದಾನದಿಂದ ಗಳಿಸಲಾದ ಎಲ್ಲಾ ಪುಣ್ಯವು ಈ ಬಂಧುವಿಗೆ ಹಂಚಲ್ಪಡಲಿ ಅಥವಾ ಈ ಹೆಸರಿನ ಮಿತ್ರನಿಗೆ ಹಂಚಲ್ಪಡಲಿ". ಈ ರೀತಿಯ ಇಚ್ಛಾಯುಕ್ತ ಪುಣ್ಯಾನು ಮೋದನೆಯು ಸಹಾ ಇನ್ನೊಂದು ಬಗೆಯ ಪುಣ್ಯಕರ್ಮವೇ ಆಗಿದೆ. ಆದರೆ ಇದನ್ನು ಅತ್ಯಂತ ಶ್ರದ್ಧೆಯಿಂದ ಹಾಗು ವಿಚಾರಶೀಲತೆಯಿಂದ

ಮಾಡಬೇಕಾಗಿದೆ. ಹಾಗಾದಾಗ ಇಂತಹ ಪುಣ್ಯಾನುಮೋದನೆಯಿಂದಾಗಿ ದಾನಿಗೂ ಹಾಗು ಸ್ವೀಕೃತನಿಗೂ ಲಾಭಗಳು ದೊರೆಯುತ್ತದೆ.

ಇಲ್ಲಿ ದಾನಿಯು ಮನಸ್ಸು ಪುಣ್ಯದ ಸಂವೃದ್ಧಿಯಿಂದಾಗಿ ಶ್ರೀಮಂತವಾಗಿರುತ್ತದೆ. ಹಾಗೆಯೇ ಸ್ವೀಕೃತನ ಮನಸ್ಸು ಸಹಾ ಪುಣ್ಯವನ್ನು ಪಡೆದು ಸಂವೃದ್ಧತೆ ಪಡೆದಿರುತ್ತದೆ. ಈ ಪ್ರಕ್ರಿಯೆಯಲ್ಲಿ ತರ್ಕಾಧಾರಿತ ವಿವರಣೆ ಏನೆಂದರೆ ಹಂಚುವಿಕೆಯ ಪ್ರಕ್ರಿಯೆಯು ಮನಸ್ಸಿನಿಂದ ಮನಸ್ಸಿಗೆ ಪುಣ್ಯದ ವರ್ಗಾವಣೆಯಾಗಿದೆ. ಇದರ ಮೌಲ್ಯವನ್ನು ಉಡುಗೊರೆಯ ಮೌಲ್ಯದಿಂದ ಅಳೆಯಲಾಗುವುದಿಲ್ಲ. ಬದಲಾಗಿ ಇಲ್ಲಿನ ಕರ್ಮದ ಇಚ್ಛಾ ಪ್ರೇರಣೆಯ ಭಾವಾವೇಶದಿಂದ ಅಳೆಯಲಾಗುತ್ತದೆ.

ಪುಣ್ಯವು ಭೌತಿಕ ವಸ್ತುವಲ್ಲ, ಅದು ಮಾನಸಿಕ ಕ್ಷೇತ್ರಕ್ಕೆ ಸೇರಿದೆ. ಇದು ಇನ್ನೊಂದು ಮನೋಧಾತುವಾದ ಪ್ರಜ್ಞಾಗೆ ಹೋಲಿಸಿದರೆ ಇದು ಧಮ್ಮಧಾತುವಾಗಿದೆ. ಹೇಗೆಂದರೆ ಒಬ್ಬನು ತನ್ನ ಜ್ಞಾನವನ್ನು ಇನ್ನೊಬ್ಬನೊಂದಿಗೆ ಹಂಚಿಕೊಳ್ಳುವಂತೆ ಅಥವಾ ಹಲವರೊಂದಿಗೆ ಹಂಚಿಕೊಳ್ಳುವಂತೆ. ಹೇಗೆಂದರೆ ಅನೇಕ ಮಾಧ್ಯಮದ ಮೂಲಕ ನುಡಿಯುವುದರಿಂದ, ಬರಹದಿಂದ, ರೇಡಿಯೋ, ಟೀವಿ ಅಥವಾ ನಾಟಕದ ಪ್ರದರ್ಶನದಿಂದ ಇತ್ಯಾದಿ. ಇಲ್ಲಿ ದಾನಿಯು ಜ್ಞಾನವನ್ನು ಹಂಚುವುದರಿಂದಾಗಿ ಸದಾ ಸಂತೃಪ್ತವಾಗುತ್ತದೆ ಮತ್ತು ವಿಕಸಿತವಾಗುತ್ತದೆ.

ಇಲ್ಲಿ ಈ ಪ್ರಕ್ರಿಯೆಯಿಂದ ಒಬ್ಬನು ಏನನ್ನು ಕಳೆದುಕೊಳ್ಳುವುದಿಲ್ಲ. ಬದಲಾಗಿ ಇದ್ದುದಕ್ಕಿಂತ ಹೆಚ್ಚಾಗಿಯೇ ಗಳಿಸುತ್ತಾನೆ. ಮೊದಲಿಗೆ ಆತನ ಜ್ಞಾನವು ಆಳವಾಗುತ್ತದೆ ಮತ್ತು ವಿಶಾಲವಾಗುತ್ತದೆ. ಅದರಿಂದಾಗಿ ಆತನ ಮನಸ್ಸು ಇನ್ನಷ್ಟು ಸಂವೃದ್ಧವಾಗುತ್ತದೆ. ಎರಡನೆಯದಾಗಿ ಜ್ಞಾನ ಸ್ವೀಕರಿಸುವವನ ಮನಸ್ಸು ಸಹ ಸಂವೃದ್ಧವಾಗುತ್ತದೆ. ಹೀಗೆಯೇ ಆತನು ಸಹ ಅದೇ ಜ್ಞಾನವು ಅಸಂಖ್ಯಾ ವ್ಯಕ್ತಿಗಳಿಗೆ ತಲುಪುವಷ್ಟು ಸಮರ್ಥನಾಗುತ್ತಾನೆ. ಹೇಗೆ ಜ್ಞಾನವು ವಿಶಾಲ, ವೈಶಲ್ಯವಾಗಿ ಹರಡುತ್ತಿರುತ್ತದೋ ಹಾಗೆಯೇ ಜ್ಞಾನ ಗಳಿಸಿದವರ ಮನಸ್ಸು ಸಹಾ



ಆಳವಾಗುತ್ತ ಸಂವೃದ್ಧವಾಗುತ್ತದೆ. ಇದೇ ಉಪಮೆಯ ರೀತಿಯಲ್ಲೇ ಪುಣ್ಯವು ಸಹಾ ವ್ಯಕ್ತಿಯೊಬ್ಬನೇ ಪಡೆಯುವುದಿಲ್ಲ. ಬದಲಾಗಿ ಬಹಳಷ್ಟು ಜನರು ಒಟ್ಟಾಗಿಯೇ ಅದೇರೀತಿಯಲ್ಲಿಯೇ ಸಂಪಾದಿಸುವರು. ಹೇಗೆಂದರೆ ಶಾಲೆಯಲ್ಲಿ ಒಂದೇ ಗುರುವಿನಿಂದ ಶಿಷ್ಯರ ಸಮೂಹವು ಜ್ಞಾನ ಪಡೆಯುವಂತೆ ಗಳಿಸುವರು.

ಬೌದ್ಧರಲ್ಲಿ, ಆಹ್ವಾನಿಸದವರೂ ಸಹ ಆನಂದವಾಗಿ ಪುಣ್ಯಕರ್ಮ ಮಾಡುತ್ತಿರುವಾಗ ಭಾಗವಹಿಸುತ್ತಾರೆ. ಇದರ ಹಿಂದಿರುವ ಉದ್ದೇಶವೇನೆಂದರೆ, ಇದರಿಂದಾಗಿ ಆತನು, ಈತನು, ಸರ್ವರೂ ಪುಣ್ಯ ಗಳಿಸುತ್ತಾರೆ. ಹೀಗಾಗಿ ಆತನಾಗಲಿ, ಅವಳಾಗಲಿ ಪುಣ್ಯವನ್ನು ತೀರಿಹೋದ ಅಥವಾ ಜೀವಂತವಾಗಿರುವ ಆತನಿಗೆ/ಅವಳಿಗೆ ವರ್ಗಾಯಿಸಲು ಅರ್ಹರಾಗಿರುತ್ತಾರೆ.

ಹೀಗೆ ಸಾಮೂಹಿಕ ದಾನವನ್ನು ಅನಂತವಾಗಿ ವಿಸ್ತರಿಸಬಹುದು, ಇದನ್ನು ಮಾಡುತ್ತಿರುವವನಾಗಲಿ ಅಥವಾ ಭಾಗವಹಿಸುವವರಾಗಲಿ ಇದರ ಪ್ರಬಲ ಪರಿಣಾಮಕಾರಿ ಶಕ್ತಿಯನ್ನು ಪೂರ್ಣವಾಗಿ ಅರಿತಿರುತ್ತಾರೆ. ಇನ್ನೊಂದು ವಿಧದಲ್ಲಿ ಹೇಳುವುದಾದರೆ ಪ್ರಜ್ಞಾದ ಆಧಾರದ ಮೇಲೆ ಸ್ಥಾಪಿತವಾಗಿರುವ ಶ್ರದ್ಧಾವು ಪುಣ್ಯಾನುಮೋದನೆಯಲ್ಲಿ ಮಹತ್ತರ ಪಾತ್ರವಹಿಸುವ ಧಾತುವಾಗಿದೆ.

ಪುಣ್ಯಾನುಮೋದನೆಯಲ್ಲಿ ಪಾಲ್ಗೊಳ್ಳುವವ ಸಹಾ ಇಂತಹ ಸುವರ್ಣ ಅವಕಾಶ ಸಿಕ್ಕಿರುವುದಕ್ಕೆ ಅಪಾರ ಕೃತಜ್ಞನಾಗಿರುತ್ತಾನೆ ಮತ್ತು ಆನಂದದಿಂದ ಕೃತಜ್ಞತೆಯನ್ನು ವ್ಯಕ್ತಿಪಡಿಸುತ್ತಾನೆ. ಆಗ ಆತನು 'ಸಾಧು, ಸಾಧು, ಸಾಧು' ಎಂದು ಉದ್ಘರಿಸಿ, "ಎಂತಹ ಅದ್ಭುತ, ಎಷ್ಟು ಆಶ್ಚರ್ಯಕರ! ಇಂತಹ ಅವಕಾಶ ಸಿಕ್ಕಿದುದಕ್ಕೆ ನಾನೇ ಧನ್ಯ ಎಂದು ಆನಂದಭರಿತನಾಗುತ್ತಾನೆ.

ಈ ಪುಸ್ತಕದ ಹಿಂದಿನ ಸಂಪುಟದಲ್ಲಿ ಸೂಚಿಸಿರುವುದು ಏನೆಂದರೆ ಬ್ರಾಹ್ಮಣ ಪಂಡಿತನಾದ ಜಾನುಸ್ಸೋಣಿಯು ಇಂತಹ ವಿಧಿವಿಧಾನಗಳ ಬಗ್ಗೆ ಸಂಶಯ ವ್ಯಕ್ತಪಡಿಸುತ್ತಾನೆ. ಆತನು ಬಹಿರಂಗವಾಗಿಯೇ ಈ

ಪುಣ್ಯಾನುಮೋದನೆ ಮಹತ್ತರತೆಯುನ್ನು ತಾನು ಅರಿತಿಲ್ಲವೆಂದು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತಾನೆ. ಅಂದರೆ ಪ್ರೇತಗಳಿಗೆ ಪುಣ್ಯವನ್ನು ಹಂಚಿದಾಗ ಒಬ್ಬನು ಪುಣ್ಯವನ್ನು ಪಡೆಯುತ್ತಾನೆ.

ಬೌದ್ಧರ ಪುಣ್ಯಾನುಮೋದನೆಯ ಆಚರಣೆಯು ಬೇರ್‍ಯಾವ ಧಮ್ಮದಲ್ಲಿಯೂ ಕಲಿಸುವುದಿಲ್ಲ. ಈ ಕ್ರಿಯೆಯನ್ನು ಜೀವಂತವಾಗಿರುವವರಿಗೆ ಅಥವಾ ಪ್ರೇತಗಳಿಗೆ, ಅದರಂತೆಯೇ ವ್ಯಕ್ತಿಗೆ ಅಥವಾ ಸಮೂಹಕ್ಕೆ ಇದನ್ನು ವರ್ಗಾಯಿಸಬಹುದು.

ಬೇರೆಡೆ ಈ ಪುಣ್ಯಾನುಮೋದನೆಯ ತರ್ಕಾಧಾರಿತ ವಿವರಣೆ ಇಲ್ಲ. ಏಕೆಂದರೆ ಅಲ್ಲಿ ದೇವರ ಅಥವಾ ಸೃಷ್ಟಿಕರ್ತನ ನಂಬಿಕೆಯಿದೆ. ಆ ನಂಬಿಕೆಯ ಪ್ರಕಾರ ದೇವರೇ ಪ್ರತಿಯೊಬ್ಬನ ಭವಿಷ್ಯವನ್ನು (ಅದೃಷ್ಟ) ನಿರ್ಧರಿಸುತ್ತಾನೆ. ಅವರ ಮನಸ್ಸಿನಲ್ಲಿ ಈ ತರಹದ ದೃಷ್ಟಿಕೋನವು ಸ್ಥಿರವಾಗಿಬಿಡುತ್ತದೆ. ಅದು ಏನೆಂದರೆ ಒಬ್ಬನ ಅದೃಷ್ಟವನ್ನು ಇನ್ಯಾರೋ (ದೇವರು) ನೋಡಿಕೊಳ್ಳುವುದು. ಅಂತಹ ಮಿಥ್ಯಾದೃಷ್ಟಿಯಿದ್ದಾಗ ಪುಣ್ಯಾನುಮೋದನೆಯ ಸತ್ಯತೆಯು ಪೂರ್ಣವಾಗಿ ತಡೆಗೊಳಲ್ಪಡುವುದು. ಆದ್ದರಿಂದಾಗಿ ಪುಣ್ಯಾನುಮೋದನೆಯ ಮಹತ್ವ ಅರ್ಥಮಾಡಿಕೊಳ್ಳಬೇಕಾದರೆ ಒಬ್ಬನು ಕರ್ಮ ನಿಯಮವನ್ನು ಮತ್ತು ಪುನರ್ಜನ್ಮವನ್ನು ಸ್ಪಷ್ಟವಾಗಿ ಬೌದ್ಧರ ರೀತಿಯಲ್ಲಿ ಅರಿತುಕೊಳ್ಳುವುದು ಅತ್ಯಗತ್ಯವಾಗಿದೆ.



# ಬೋಧಿಸತ್ತ ತಿಲೋಕ ವಿಜಯ

## ಬೌದ್ಧರ ಪುಣ್ಯಾನುಮೋದನೆ

ಒಮ್ಮೆ ಬೋಧಿಸತ್ತರು ರಾಜಕುಮಾರ ತಿಲೋಕ ವಿಜಯರಾಗಿ ಹುಟ್ಟಿದರು. ಅವರು ಶ್ರೇಷ್ಠ ಆಡಳಿತಗಾರನ ಮಗನಾಗಿ ಹುಟ್ಟಿದ್ದರು. ಅವರು ಚಿಕ್ಕಂದಿನಿಂದಲೂ ಮಹಾದಾನಿಯಾಗಿದ್ದರು. ಅಪಾರ ದಯಾಶಾಲಿಗಳಾಗಿದ್ದರು. ನಂತರ ಅವರು ರಾಜನಾದ ಮೇಲೆ ಸತ್ಯದಿಂದ ಮತ್ತು ನ್ಯಾಯದಿಂದ ಪರಿಪಾಲನೆ ಮಾಡುತ್ತಿದ್ದರು. ಅವರ ಸಾಮಂತ ರಾಜರು ಅವರಿಗೆ ಅಪಾರ ಗೌರವ ನೀಡಿ ಅವರನ್ನು ಚಕ್ರವರ್ತಿ ಮಹರಾಜನನ್ನಾಗಿಸಿದರು.

ಅವರು ಪ್ರತಿನಿತ್ಯವು ಧ್ಯಾನವನ್ನು ಅಭ್ಯಾಸ ಮಾಡುತ್ತಿದ್ದರು. ಅಂದರೆ ಬೆಳಗ್ಗೆ ಎದ್ದು ರಾತ್ರಿ ಮಲಗುವ ತನಕವು 1. ದಾನ–ನಿಸ್ವಾರ್ಥ ಸೇವೆ, ಜೊತೆಗೆ 2. ಶೀಲ–ನೈತಿಕತೆಯ ಶಿಸ್ತಿನ ಆಚರಣೆ, 3. ಭಾವನ–ಧ್ಯಾನದಿಂದ ಚಿತ್ತದ ವಿಕಾಸ. ಈ ಮೂರನ್ನೂ ಒಳಗೊಂಡ ಧಮ್ಮ ಶಿಕ್ಷಣದಲ್ಲಿ ನಿರತರಾಗಿರುತ್ತಿದ್ದರು.

ಈ ಮೂರನ್ನು ಒಳಗೊಂಡ ಪರಮಾರ್ಥ ಶಿಕ್ಷಣವು ಮಾನವನನ್ನು ಪರಮಾರ್ಥಿಕವಾಗಿ ಬಲಿಷ್ಠನಾಗಿ ಹೊರಹೊಮ್ಮಲು ಸಹಾಯಕವಾಗಿರುವ ಬಲಗಳಾಗಿವೆ. ಆತನು ಸಮ್ಮಾ ಸ್ಮೃತಿಯನ್ನು ಅಪಾರವಾಗಿ ವೃದ್ಧಿಸಿ ಪರಿಶುದ್ಧತೆಯು ಮತ್ತು ವಿಕಾಸದ ಹಂತಕ್ಕೆ ತೆಗೆದುಕೊಂಡು ಹೋಗಬೇಕಾಗುತ್ತದೆ. ಆತನು ತನ್ನ ಕರ್ಮ, ಮಾತು ಮತ್ತು ಯೋಚನೆಗಳ ಬಗ್ಗೆ ಮತ್ತು ಅವುಗಳನ್ನು ಚಾಲನೆ ಮಾಡುವ ಬಲಗಳ ಬಗ್ಗೆ ಪೂರ್ಣವಾಗಿ ಜಾಗರೂಕತೆ ವಹಿಸಬೇಕಾಗುತ್ತದೆ. ಈ ರೀತಿಯಾಗಿ ಆತನು ತನ್ನ ಕರ್ಮಗಳ ಬಗ್ಗೆ ಪೂರ್ಣ ನಿಯಂತ್ರಣ ತಾಳುತ್ತಾನೆ. ಹೀಗಾಗಿ ಆತನು ಸರ್ವಜೀವಿಗಳ

ಒಳಿತಿಗಾಗಿಯೇ ಕಾರ್ಯವೆಸಗುತ್ತಾನೆ. ಬೋಧಿಸತ್ತರು ಬ್ರಹ್ಮಾಂಡದಲ್ಲಿ ನೆಲೆಯಾಗಿರುವ 31 ಕ್ಷೇತ್ರದ ಸರ್ವಜೀವಿಗಳ ಹಿತಕ್ಕಾಗಿ ಮತ್ತು ಸುಖಕ್ಕಾಗಿ ಜೀವಿಸುವೆ ಎಂದು ಪ್ರತಿಜ್ಞೆ ಮಾಡಿರುತ್ತಾರೆ. ಅಪಾರ ಪುಣ್ಯಗಳಿಸಿ, ನಂತರ ಗಳಿಸಿದ ಆ ಮಹಾ ಪುಣ್ಯವನ್ನು ಅವರು ಸರ್ವ ಜೀವಿಗಳಲ್ಲಿ ಹಂಚಿಕೊಳ್ಳುತ್ತಾರೆ. ಹೀಗೆ ಅವರು ತಾವು ತಮ್ಮ ಕಮ್ಮ, ವಾಚಾ ಮತ್ತು ಮನಸ್ಸಿನಿಂದ ಮಾಡಿದ ಕರ್ಮಗಳಿಂದ ಗಳಿಸಿದ ಪುಣ್ಯವನ್ನು ಈ ರೀತಿ ಪುಣ್ಯಾನುಮೋದನೆಯಿಂದ ಮಾನಸಿಕವಾಗಿ ಅಥವಾ ಗಂಭೀರ ಕಂಠೋಕ್ತಿಯಲ್ಲಿ ಸಂಕಲ್ಪಿಸಿ ಬ್ರಹ್ಮಾಂಡದ ಸರ್ವಜೀವಿಗಳಲ್ಲಿ ಪುಣ್ಯವನ್ನು ಹಂಚಿಕೊಳ್ಳುತ್ತಾರೆ. ಈ ರೀತಿ ಪುಣ್ಯವನ್ನು ಹಂಚಿಕೊಳ್ಳುವಿಕೆಯು ಸಹಾ ಇನ್ನೊಂದು ಬಗೆಯ ಪುಣ್ಯಕರ್ಮವಾಗಿದೆ. ಇದರಿಂದ ಜೀವನವು ನಿರಂತರ ದಾನಾಭ್ಯಾಸಕ್ಕೆ ತಿರುಗಿದಂತಾಗುತ್ತದೆ.

ಈ ರೀತಿಯಾಗಿ ಇಡೀ ಜೀವನ ಪರ್ಯಂತವಾಗಿ ಬೋಧಿಸತ್ವರು ಆಚರಣೆಯಲ್ಲಿ ನಿರತರಾಗಿ ಮುಂದಿನ ಜನ್ಮದಲ್ಲಿ ಸಕ್ಕರಾಗಿ (ದೇವೇಂದ್ರ) ದೇವಲೋಕದಲ್ಲಿ ಉದಯಿಸುತ್ತಾರೆ. ಅಲ್ಲಿ ಅವರು 33 ದಿವ್ಯ ದೇವತೆಗಳ ರಾಜರಿಗೆ ಅಧಿಪತಿಯಾಗಿ ತಾವತಿಂಸ ಲೋಕದಲ್ಲಿ ದೇವರಾಜರಾಗಿ ಕಾಣಿಸಿಕೊಳ್ಳುತ್ತಾರೆ.

ಬುದ್ಧ ಭಗವಾನವರು 'ಬುದ್ಧಾಪದಾನ'ದಲ್ಲಿ ಬೋಧಿಸತ್ತ ತಿಲೋಕ ವಿಜಯರು ತಮ್ಮ ಕರ್ಮ, ವಾಚಾ ಮತ್ತು ಮನಸ್ಸಿನಿಂದ ಸುಆಚರಣೆಗೈದು ಹೇಗೆ ಆ ಪುಣ್ಯವನ್ನು ಸರ್ವಜೀವಿಗಳೊಂದಿಗೆ ಪುಣ್ಯಾನುಮೋದನೆ ಮಾಡುತ್ತಿದ್ದರು ಎಂಬುದನ್ನು ವಿವರವಾಗಿ ವಿವರಿಸಲಾಗಿದೆ. ಆಗ ಅವರು ಗಂಭೀರ ಕಂಠೋಕ್ತಿಯಲ್ಲಿ ಹೇಗೆ ಈ ಪುಣ್ಯವನ್ನು ಹಂಚುತ್ತಿದ್ದರು ಎಂಬುದರ ವಿವರ ಉಲ್ಲೇಖವಿದೆ.

ಹೇಗೆ ರಾಜ ತಿಲೋಕ ವಿಜಯರು ತಾವು ಗಳಿಸಿದ ಪುಣ್ಯವನ್ನು ಸರ್ವಜೀವಿಗಳೊಂದಿಗೆ ಹೇಗೆ ವರ್ಗಾಯಿಸಿ ಹಂಚಿಕೊಳ್ಳುತ್ತಿದ್ದರು ಎಂಬುದನ್ನು 'ಅಪಾದಾನ'ದಲ್ಲಿ ಹೀಗೆ ವಿವರಿಸಲಾಗಿದೆ:



1. "ನನ್ನ ಸುಕರ್ಮ, ಸುವಾಚ ಮತ್ತು ಸುಯೋಚನೆಗಳಿಂದಾಗಿ ಏನೆಲ್ಲಾ ಪುಣ್ಯವು ಸಂಚಯಿತವಾಯಿತೋ ಆ ಪುಣ್ಯ ಫಲದಿಂದಾಗಿ ದಿವ್ಯವಾದ ಕ್ಷೇತ್ರಗಳಿಗೆ ತಲುಪಬಹುದೋ ಆ ಎಲ್ಲಾ ಪುಣ್ಯವನ್ನು ನಾನು ಸರ್ವ ಜೀವಿಗಳಲ್ಲಿ ಅಂದರೆ ಕಾಮವಚರ, ರೂಪವಚರ ಹಾಗು ಅರೂಪವಚರದಲ್ಲಿರುವ ಸರ್ವರಲ್ಲಿಯೂ ಹಂಚುತ್ತೇನೆ. ಅವರೆಲ್ಲರಿಗೂ ನನ್ನ ಪುಣ್ಯದಲ್ಲಿ ಭಾಗಿಯಾಗುವಂತೆ ಮಾಡುತ್ತೇನೆ. ನನ್ನ ಸರ್ವ ಪುಣ್ಯವು ಸರ್ವಜೀವಿಗಳಿಗೆ ಸೇರಲಿ."

2. "ಯಾವ ಜೀವಿಗಳಿಗೆ ನನ್ನ ಪುಣ್ಯಾನುಮೋದನೆಯ ಅರಿವಿದೆಯೋ ಅವರೆಲ್ಲರೂ ಪೂರ್ಣ ಪ್ರಮಾಣದಲ್ಲಿ ಇದರ ಫಲದಲ್ಲಿ ಆನಂದಿಸಲಿ. ಯಾವೆಲ್ಲಾ ಜೀವಿಗಳಿಗೆ ನನ್ನ ಪುಣ್ಯ ಹಂಚುವಿಕೆಯ ಅರಿವಿಲ್ಲವೋ ವಿವಿಧ ಕ್ಷೇತ್ರದಲ್ಲಿರುವ ದೇವದೇವತೆಗಳು ಅವರಿಗೆ ತಿಳಿಸಿ ಅವರಿಗೂ ಕಲ್ಯಾಣವನ್ನುಂಟು ಮಾಡಲಿ."

3. "ಇಡೀ ಬ್ರಹ್ಮಾಂಡದಲ್ಲಿರುವ ಸರ್ವಜೀವಿಗಳು, ತಾವತಿಂಸ ದೇವಲೋಕದ ಜೀವಿಗಳು, ಆಹಾರವನ್ನು ಅವಲಂಬಿಸಿ ಜೀವಿಸುತ್ತಿರುವ ಎಲ್ಲಾ ಜೀವಿಗಳು, ಅವರೆಲ್ಲರೂ ಈ ಪುಣ್ಯದಲ್ಲಿ ಭಾಗಿಯಾಗಲಿ. ಹಸಿದವರಿಗೆ ಈ ಪುಣ್ಯ ವರ್ಗಾವಣೆಯ ಫಲದಿಂದಾಗಿ, ಅವರ ಇಷ್ಟದ ಆಹಾರವು ಅವರಿಗೆ ಹೇರಳವಾಗಿ ಸದಾ ದೊರೆಯಲಿ. ಈ ಎಲ್ಲಾ ಪುಣ್ಯವನ್ನು ಸದಾಚಾರದಿಂದಲೇ ಸುಕರ್ಮದಿಂದಲೇ ಸುಭಾಷಿತದಿಂದಲೇ ಮತ್ತು ಯೋಗ್ಯ ಯೋಚನೆಗಳಿಂದಲೇ ಗಳಿಸಲಾಗಿದೆ." ಬುದ್ಧಾಪದಾನ ಪಾಲಿ 49,50,51.

ಬೋಧಿಸತ್ತ ತಿಲೋಕವಿಜಯ ಜಾತಕವು ಸ್ಪಷ್ಟವಾಗಿ ಪುಣ್ಯಾನು ಮೋದನೆಯ ಶಕ್ತಿಯನ್ನು ತೋರಿಸುತ್ತದೆ. ಅದರಲ್ಲಿ ತನ್ನ ಒಳ್ಳೆಯ ಕರ್ಮಗಳಿಂದ ಗಳಿಸಲಾದ ಅಪಾರ ಪುಣ್ಯವನ್ನು ಎಲ್ಲಾ ದಿವ್ಯ ಜೀವಿಗಳಲ್ಲಿ, ಮಾನವರಲ್ಲಿ ಮತ್ತು ಮಾನವೇತರ ಜೀವಿಗಳಲ್ಲಿ ಹಂಚಲಾಗುತ್ತದೆ. ಈ ಮಹಾನ್ ಬಲದಿಂದಾಗ ಪುಣ್ಯ ಕೊರತೆಯ ಕಾರಣದಿಂದಾಗಿ ಅನುಭವಿಸುತ್ತಿರುವ ಎಲ್ಲಾ ದುಃಖಸ್ಥಿತಿಗಳನ್ನು ಬದಲಾಯಿಸಿ ದುಃಖವಿಮುಕ್ತರನ್ನಾಗಿಸಬಹುದು.

ಒಬ್ಬ ಉತ್ತಮ ಧಮ್ಮಪಾಲಕನು ತನ್ನ ಪುಣ್ಯವನ್ನೆಲ್ಲಾ ಎಲ್ಲಾ ಪ್ರೇತಗಳಿಗೆ ಹಾಗೆಯೇ ದೇವತೆಗಳಿಗೆ, ಮಾನವರಿಗೆ, ಪ್ರಾಣಿಗಳಿಗೆ ಸಂಕ್ಷಿಪ್ತವಾಗಿ ಹೇಳುವುದಾದರೆ ಸತ್ತವರಿಗೆ ಹಾಗು ಬದುಕಿರುವವರಿಗೆ ತಾನು ಯೋಗ್ಯವಾದ ಜೀವನದಿಂದ, ಪ್ರಯತ್ನದಿಂದ ಗಳಿಸಲಾದ ಸರ್ವ ಪುಣ್ಯವನ್ನೆಲ್ಲಾ ಸರ್ವಜೀವಿಗಳಿಗೆ ಧಾರೆಯೆರೆಯುತ್ತಾನೆ.

ಪುಣ್ಯವನ್ನು ವೈಯುಕ್ತಿವಾಗಿಯೂ ಹಾಗು ಒಟ್ಟಾಗಿಯೂ ಪರಿಣಾಮಾತ್ಮಕವಾಗಿ ಹಂಚಬಹುದಾಗಿದೆ. ಅಂದರೆ ಒಬ್ಬ ಜೀವಿಗೆ ಮಾತ್ರವಲ್ಲ. ಬದಲಾಗಿ ಎಲ್ಲಾ ವರ್ಗದ ಜೀವಿಗಳು ದಾನಿಯ ಫಲವನ್ನು ಪಡೆಯಬಹುದಾಗಿದೆ.

ಒಬ್ಬ ಉತ್ತಮ ಬೌದ್ಧನು ತನ್ನೆಲ್ಲಾ ಪುಣ್ಯಕರ್ಮಗಳ ಫಲವನ್ನು ಮಾನಸಿಕವಾಗಿಯೇ ದೃಢಸಂಕಲ್ಪ ಮಾಡಿ ವರ್ಗಾಯಿಸಬಹುದಾಗಿದೆ ಅಥವಾ ಗಂಭೀರ ಕಂಠೋಕ್ತಿಯಿಂದ ಸಂಕಲ್ಪಿಸಿ ಮೌಖಿಕವಾಗಿಯು ವರ್ಗಾಯಿಸಬಹುದಾಗಿದೆ. ಆದರೆ ಅದಕ್ಕೆ ಮುನ್ನ ಆತನು ಪುಣ್ಯವನ್ನು ಈ ವಿಧಗಳಲ್ಲಿ ಸಂಪಾದಿಸಬೇಕಾಗಿದೆ. ಹೇಗೆಂದರೆ ಬುದ್ಧರಿಗೆ, ಧಮ್ಮಕ್ಕೆ ಮತ್ತು ಸಂಘಕ್ಕೆ ಪೂಜಿಸುವುದರಿಂದ, ಪುಷ್ಪಗಳನ್ನು ಅರ್ಪಿಸುವುದರಿಂದಾಗಿ, ಧಮ್ಮ ಶ್ರವಣದಿಂದಾಗಿ ಅಥವಾ ಧಮ್ಮೋಪದೇಶ ಮಾಡುವುದರಿಂದಾಗಿ, ಅಥವಾ ಶೀಲಪಾಲನೆಯಿಂದಾಗಿ ಅಥವಾ ಧ್ಯಾನ ಲಾಭ ಪಡೆಯುವುದ ರಿಂದಾಗಿ ಅಥವಾ ಇನ್ನಾವುದೇ ಸೇವಾಯುತ ಪುಣ್ಯಕಾರ್ಯಗಳನ್ನು ಮಾಡಿ ಪುಣ್ಯ ಸಂಚಯಿಸಿ ಆತನು ಪುಣ್ಯಾನುಮೋದನೆ ಮಾಡುತ್ತಾನೆ.

ಪುಣ್ಯ ವರ್ಗಾಯಿಸುವಾಗ ಆ ಉತ್ತಮ ಕಾರ್ಯ ಮಾಡುವಾಗ, ಒಬ್ಬನು ನಿಜವಾದ ಉದ್ದೇಶವನ್ನು ಅಥವಾ ನಿಜ ಇಚ್ಛೆಯನ್ನು ಮತ್ತು ದೃಢಸಂಕಲ್ಪವನ್ನು ಶ್ರದ್ಧಾಯುತವಾಗಿ ಮಾಡಬೇಕಾಗುತ್ತದೆ. ಉದಾಹರಿಸುವುದಾದರೆ ಒಬ್ಬನು ಹೀಗೆ ಹೇಳಬಹುದು "ಈ ಪುಣ್ಯಕರ್ಮದ ಬಲದಿಂದಾಗಿ ನಾನು ಜೀವನದಲ್ಲಿ ಎದುರಿಸುತ್ತಿರುವ ಎಲ್ಲಾ ತೊಂದರೆಗಳು ಮತ್ತು ಎಲ್ಲಾ ಅಪಾಯಗಳು ದೂರವಾಗಲಿ". ಹೀಗೆ ಇಲ್ಲಿ ಆತನು



ಫಲಾಪೇಕ್ಷೆ (ಪರಿಣಾಮ) ನಿರೀಕ್ಷಿಸಿದ್ದೇ ಆಗಿದ್ದಲ್ಲಿ ಎಂತಹ ಫಲಿತಾಂಶ ಬಯಸುವನೋ ಅದನ್ನು ಆತನು ಸ್ಪಷ್ಟವಾಗಿ ಸಂಕಲ್ಪಿಸಬೇಕಾಗುತ್ತದೆ. ಕೆಲವು ಜನರು ಪ್ರಾಪಂಚಿಕ ಲಾಭಗಳನ್ನು ನಿರೀಕ್ಷಿಸುತ್ತಾರೆ ಅಥವಾ ದಿವ್ಯಲೋಕಗಳಲ್ಲಿ ಪುನರ್ಜನ್ಮವನ್ನು ಬಯಸುತ್ತಾರೆ ಅಥವಾ ಮಾನವ ಜನ್ಮದಲ್ಲೇ ಉನ್ನತವಾದ ಸೌಕರ್ಯಗಳೆಲ್ಲವನ್ನು ಬಯಸುತ್ತಾರೆ. ಈ ಎಲ್ಲಾ ಇಚ್ಛೆಗಳು ಆಸೆಯಿಂದ ರಚಿತವಾಗಿವೆ. ಅವು ಪರಿಮಿತ ಪರಿಣಾಮಗಳನ್ನು ನೀಡುತ್ತವೆ. ಹಾಗಿರುವಾಗಲು ಪರಮಾರ್ಥಿಕ ಮನುಷ್ಯನು ಅಂತಹ ಪ್ರಾಪಂಚಿಕ ಬಯಕೆಗಳನ್ನು ಹುಡುಕಬಾರದು.

ಉನ್ನತಮಟ್ಟದ ಲಾಭಗಳನ್ನು ಹುಡುಕುವವರು ಮನಃಪೂರ್ವಕವಾಗಿ ಹೀಗೆ ಇಚ್ಛಿಸಬೇಕು: "ಈ ಸತ್ಕರ್ಮದ ಬಲದಿಂದಾಗಿ ಲಭಿತವಾಗುವ ಪುಣ್ಯದಿಂದಾಗಿ ನಾನು ಸಂಸಾರದ ಬಂಧನಗಳಿಂದ ಮುಕ್ತನಾಗಲಿ ಅಥವಾ ಜನ್ಮಗಳಿಂದ ಮುಕ್ತನಾಗಲಿ". ಯಾವಾಗ ಒಬ್ಬನು ಅಂತಹ ಪರಮಾರ್ಥಿಕ ಲಾಭವನ್ನು ಹುಡುಕುವನೋ, ಆಗ ಈ ಕುಶಲಕಮ್ಮ ಹಾಗೆಯೇ ಒಬ್ಬನು ಅದರಿಂದ ಪಡೆಯಲಿಚ್ಛಿಸುವ ಲಾಭಗಳನ್ನು ಪಡೆಯುತ್ತಾನೆ. ನಂತರ ಹಾಗೆಯೇ ಪಾರಮಿಯ (ಪರಿಪೂರ್ಣತೆಯ) ನಿಲುವನ್ನು ಪಡೆಯುತ್ತಾನೆ.

ಬುದ್ಧ ಧಮ್ಮದಲ್ಲಿ ಕಮ್ಮದ (ಕರ್ಮ) ಅರ್ಥವೇನೆಂದರೆ ಇಚ್ಛಾಪೂರ್ವಕ ಕ್ರಿಯೆಯಾಗಿದೆ. ಇದು ನಿಯಮವಾಗಿದೆ. ಸಿದ್ಧಾಂತವಾಗಿಲ್ಲ ಅಥವಾ ತತ್ವವಾಗಿಲ್ಲ ಅಥವಾ ಕೇವಲ ನಂಬಿಕೆಯು ಆಗಿಲ್ಲ. ಕಮ್ಮ ನಿಯಮವು ತನ್ನದೇ ರೀತಿಯಲ್ಲಿ ಕಾರ್ಯವಹಿಸುತ್ತದೆ ಮತ್ತು ಯಾವುದೇ ಮೂಲಗಳಿಂದ ಅಡ್ಡಿಗಳನ್ನು ತಾಳುವುದಿಲ್ಲ. ಕಮ್ಮ ನಿಯಮದಲ್ಲಿ ಯಾವುದೇ ಮಾನವನ ಅಥವಾ ದೇವರ ಹಸ್ತಕ್ಷೇಪವಿರುವುದಿಲ್ಲ. ಇದು ನಿಯಮವಾಗಿದೆ. ಏಕೆಂದರೆ ಇದು ಸ್ವಯಂ ಶಾಸನವಾಗಿದೆ. ಪ್ರಾಕೃತಿಕ ನಿಯಮಗಳಂತೆಯೇ ಕಮ್ಮ ನಿಯಮವು ಸ್ವತಂತ್ರವಾಗಿಯೇ ತನಗೆ ತಾನೇ ಕಾರ್ಯನಿರ್ವಹಿಸುತ್ತದೆ. ಅಂದರೆ ಸ್ವಯಂ ನಿಯಂತ್ರಣದ ಹಾದಿಯಲ್ಲೇ ಕಾರ್ಯನಿರ್ವಹಿಸುತ್ತದೆ ಮತ್ತು ಪುಣ್ಯಾನುಮೋದನೆಯು ಸಹಾ ಕಮ್ಮವಾಗಿದೆ. ಆದುದರಿಂದ ಪುಣ್ಯದ

ಹಂಚುವಿಕೆಯು ಬೌದ್ಧರ ಕಮ್ಮನಿಯಮ ಮತ್ತು ಪುನರ್ಜನ್ಮದ ನಿಯಮಗಳಿಗೆ ಒಪ್ಪುತ್ತದೆ.

ಧಾರ್ಮಿಕ ಸಮಾರಂಭವು ನಿರ್ವಹಿಸಿದ ನಂತರ ವೈಯಕ್ತಿಕ ಸ್ಥಳದಲ್ಲಿ ಆಗಲಿ ಅಥವಾ ಸಾರ್ವಜನಿಕ ಸಮಾರಂಭದಲ್ಲಿಯೇ ಆಗಲಿ, ಈ ಗಾಥೆಗಳ ಮೂಲಕ ಪುಣ್ಯಾನುಮೋದನೆಯನ್ನು ಹೀಗೆ ಮಾಡಬೇಕು.

**"ಎತ್ತಾವತಾ ಚ ಅಮ್ಹೇಹಿ**
**ಸಂಭತಂ ಪುಞ್ಞಸಂಪದಂ;**
**ಸಬ್ಬೆ ದೇವಾ ಅನುಮೋದಂತು**
**ಸಬ್ಬ ಸಂಪತ್ತಿ ಸಿದ್ಧಿಯಾ."**

"ಎಲ್ಲಾ ದೇವ ದೇವತೆಗಳು ನಮ್ಮಿಂದ ಗಳಿಸಲಾದ ಈ ಪುಣ್ಯ ನಿಧಿಯನ್ನು ಹಂಚಿಕೊಳ್ಳಲಿ. ನಮಗಾಗಿ ಸರ್ವ ಸಂಪತ್ತು ಸಿದ್ಧಿಗಳು ಸಿಗಲಿ.."

**"ಎತ್ತಾವತಾ ಚ ಅಮ್ಹೇಹಿ**
**ಸಂಭತಂ ಪುಞ್ಞಸಂಪದಂ;**
**ಸಬ್ಬೆ ಭೂತ ಅನುಮೋದಂತು**
**ಸಬ್ಬ ಸಂಪತ್ತಿ ಸಿದ್ಧಿಯಾ."**

"ಎಲ್ಲಾ ಜೀವಿಗಳು, ನಮ್ಮಿಂದ ಗಳಿಸಲಾದ ಈ ಪುಣ್ಯನಿಧಿಯನ್ನು ಹಂಚಿಕೊಳ್ಳಲಿ. ನಮಗಾಗಿ ಸರ್ವ ಸಂಪತ್ತು, ಸಿದ್ಧಿಗಳು ಸಿಗಲಿ."

**"ಎತ್ತಾವತಾ ಚ ಅಮ್ಹೇಹಿ**
**ಸಂಭತಂ ಪುಞ್ಞಸಂಪದಂ;**
**ಸಬ್ಬೆ ಸತ್ತಾ ಅನುಮೋದಂತು**
**ಸಬ್ಬ ಸಂಪತ್ತಿ ಸಿದ್ಧಿಯಾ."**

"ಇಂದ್ರೀಯಗಳನ್ನು ಅಸ್ತಿತ್ವವನ್ನು ಹೊಂದಿರುವ ಎಲ್ಲಾ ಸತ್ವಗಳು, ನಮ್ಮಿಂದ ಗಳಿಸಲಾದ ಈ ಪುಣ್ಯ ನಿಧಿಯನ್ನು ಹಂಚಿಕೊಳ್ಳಲಿ. ನಮಗಾಗಿ ಸರ್ವ ಸಂಪತ್ತು ಮತ್ತು ಸಿದ್ಧಿಗಳು ಸಿಗಲಿ."



# ಬೌದ್ಧರಲ್ಲಿ ಕೌಟುಂಬಿಕ ಬಾಂಧವ್ಯಗಳು

ಬೌದ್ಧರಲ್ಲಿ ಕೌಟುಂಬಿಕ ಮೌಲ್ಯಗಳು ಅತ್ಯಂತ ಅಗಾಧತೆಯಿಂದ ಕೂಡಿದೆ. ಅಲ್ಲಿ ಪ್ರತಿ ಸದಸ್ಯನು ಎಲ್ಲರೊಂದಿಗೆ ಉದಾತ್ತ ಬಾಂಧವ್ಯದಿಂದಿರಬೇಕಾಗುತ್ತದೆ. ಉದಾಹರಿಸುವುದಾದರೆ ಪೋಷಕರು ಮತ್ತು ಮಕ್ಕಳು, ಪತಿ ಮತ್ತು ಪತ್ನಿ, ಸೋದರ ಮತ್ತು ಸೋದರಿ, ಯಜಮಾನ ಮತ್ತು ಕಾರ್ಮಿಕ, ಗುರು ಮತ್ತು ಶಿಷ್ಯ ಇತ್ಯಾದಿ. ಈ ಎಲ್ಲಾ ಬಾಂಧವ್ಯ ಯುಕ್ತವಾದ ವರ್ತನೆ ಮತ್ತು ಯೋಗ್ಯವಾದ ನಡವಳಿಕೆಯಿಂದ ನಿಯಂತ್ರಿತವಾಗಿರಬೇಕಾಗುತ್ತದೆ. ಅಂದರೆ ಶ್ರೇಷ್ಠ ಶೀಲದಿಂದ ಕೂಡಿರಬೇಕು.

ಬೌದ್ಧ ಸಮಾಜದಲ್ಲಿ ಕುಟುಂಬವು ಸಂಸ್ಕೃತಿಯ ಮತ್ತು ನಾಗರಿಕತೆಯ ಸಣ್ಣ ಘಟಕವಾಗಿದೆ. ಕುಟುಂಬದಲ್ಲಿ ಯಾವಾಗ ಸೌಹಾರ್ದತೆ ಮತ್ತು ಸದ್ಭಾವವು ಇರುತ್ತದೆಯೋ ಆಗ ಮಾತ್ರ ಸಮಾಜದಲ್ಲಿ ಮೈತ್ರಿ ಮತ್ತು ಸ್ಥಿರತೆ ನೆಲೆಸುತ್ತದೆ. ಹೀಗಾಗಿ ಬೌದ್ಧ ಸಂಸ್ಕೃತಿ ಮತ್ತು ನಾಗರಿಕತೆಯು ಇಡಿಯಾಗಿ ಯಾವಾಗ ಕಾಣುತ್ತದೆ ಎಂದರೆ ಸಮಾಜವು ಸುಸಂಸ್ಕೃತವು ಮತ್ತು ಮೇಲೇರುವಂತಾದಾಗ ಸಾಧ್ಯವಾಗುತ್ತದೆ. ಹೀಗಾಗಿ ಕುಟುಂಬ ಸದಸ್ಯರ ಬಾಂಧವ್ಯವು ಉದಾತ್ತ ಸಂಸ್ಕೃತಿಗೆ ಮತ್ತು ನಾಗರಿಕತೆಯ ನಿರ್ಮಾಣಕ್ಕೆ ಅತ್ಯಂತ ಪ್ರಾಮುಖ್ಯತೆ ಪಡೆದಿದೆ. ಬೌದ್ಧರು ಇದನ್ನು ಸ್ವತಃ ಸುಲಭವಾಗಿ ಅರ್ಥಮಾಡಿಕೊಳ್ಳುತ್ತಾರೆ. ಅಷ್ಟೇ ಅಲ್ಲ, ಭೌತಿಕವಾದ ಸಮಾಜದಲ್ಲಿ ವಾಸವಾಗಿರುವ ಬೌದ್ಧರು ಸಹಾ, ಅಭಿವೃದ್ಧಿಶೀಲ ಪೂರ್ವತ್ತ್ವ ಮತ್ತು ಪಾಶ್ಚಿಮಾತ್ಯ ದೇಶದವರೂ ಸಹಾ ಕೌಟುಂಬಿಕ ಬಾಂಧವ್ಯದ ನಿಯಂತ್ರಣಗಳಿಂದ ಸಾಮಾಜಿಕ ಸೌಹಾರ್ದತೆಯನ್ನು ನಿರ್ವಹಿಸುತ್ತಾರೆ. ಸಿಗಾಲೊವಾದ ಸುತ್ತವು (ದಿ–38) ಈ ಬಾಂಧವ್ಯಗಳನ್ನು ವಿವರವಾಗಿ ತೋರಿಸುತ್ತದೆ.

**ಇದು ಸಿಗಾಲೋವಾದ ಸುತ್ತದ ಹಿನ್ನೆಲೆಯಾಗಿದೆ.**

ಬುದ್ಧ ಭಗವಾನರು ರಾಜಗೃಹದ ವೇಲುವನದಲ್ಲಿ ವಾಸವಾಗಿದ್ದರು. ಎಂದಿನಂತೆ ಭಗವಾನರು ಮುಂಜಾನೆಗೆ ಮುಂಚೆಯೇ ಮಹಾಕರುಣಾ ಸಮಾಪತ್ತಿಯಲ್ಲಿ ತೊಡಗಿರುವಾಗ, ಅವರು ಅಸೀಮ ಕರುಣೆಯಲ್ಲಿ ನೆಲೆಸಿರುತ್ತಾರೆ. ಅಂತಹುದೇ ವಿಶಾಲ ಆಳದ ಸಮಾಧಿಯನ್ನು ತಲ್ಲೀನರಾಗಿರುವಾಗ, ಇಂದು ಸಹಾಯ ಮಾಡಲು ಎಲ್ಲಾ ಅಂಶಗಳು ಸರಿಯಾಗಿ ಯಾರಿಗೆ ಕೂಡಿಬಂದಿದೆ ಎಂದು ಪರಿಶೀಲಿಸುತ್ತಿರುವಾಗ, ಸರ್ವ ಉನ್ನತವಾದ ಜ್ಞಾನಕ್ಕೆ ಯಾರು ಪಕ್ವರಾಗಿರುವರೋ ಅಂತಹವರು ಮಾತ್ರ ಅವರ ದಿವ್ಯದೃಷ್ಟಿಗೆ ಕಾಣಿಸತೊಡಗುತ್ತಾರೆ. ಪ್ರತಿ ವ್ಯಕ್ತಿಯ ಪ್ರಚನ್ನತೆಯನ್ನು ಪರಿಶೀಲಿಸಿ ಅವರು ಅತೀಂದ್ರಿಯ ಬಲಗಳನ್ನು ಬಳಸಿ, ಭೇಟಿಯಾಗಿ ಅಂತಹವರನ್ನು ಯೋಗ್ಯಗಮ್ಯಕ್ಕೆ ಸೇರಿಸಲು ಸುಗತರು ಶ್ರಮಿಸುತ್ತಾರೆ. ಅಲ್ಲಿ ಆತನಿಗೆ ಬೇಟಿಯಾಗಿ ಸಮ್ಮಾ ಸಂಬುದ್ಧರು ಧಮ್ಮವನ್ನು ಪರಿಣಾತ್ಮಕವಾಗಿ ಬೋಧಿಸಿ ಪರಮಾರ್ಥಿಕ ಪರಿವರ್ತನೆ ಉಂಟುಮಾಡುತ್ತಾರೆ. ಆಗ ಆತನ ಇಡೀ ಜೀವನ ಬದಲಾಗುತ್ತದೆ, ಮೂರ್ಖ, ಮೊಂಡ ಮನುಷ್ಯನನ್ನು ಸಹಾ ಸಭ್ಯ, ಸಹೃದಯ ಸೇವಾಭಾವನೆವುಳ್ಳವನ್ನನಾಗಿ ಪರಿವರ್ತಿಸುತ್ತಾರೆ. ಇದನ್ನು ಬುದ್ಧ ಭಗವಾನರು ತಾವು ಸಮ್ಮಾ ಸಂಬೋಧಿ ಪಡೆದ ದಿನದಿಂದ ಪರಿನಿಬ್ಬಾಣ ಪಡೆದ ಅಂತರದಲ್ಲಿ 45 ವರ್ಷಗಳ ಕಾಲವು ಹೀಗೆ ಅನುಕಂಪದಿಂದ ಕೂಡಿದ ಪರಮಾಥಿಕ ಪ್ರಚಾರ ಕಾರ್ಯದಲ್ಲಿ ತೊಡಗುತ್ತಿದ್ದರು.

ಒಂದುದಿನ ಪ್ರಾತಃಕಾಲ ಬುದ್ಧ ಭಗವಾನರ ಅನುಯಾಯಿಯ ಪುತ್ರನಾದ ಸಿಗಾಲನು ಬುದ್ಧರ ದಿವ್ಯದೃಷ್ಟಿಗೆ ಕಂಡುಬಂದನು. ಅಂದು ಆತನು ಬೆಳಕಿನೆಡೆಗೆ ಪರಿವರ್ತನೆಯಾಗುವ ಸಮಯ ಕೂಡಿಬಂದಿತ್ತು. ಸಿಗಾಲನ ತಂದೆ ಹಾಗು ತಾಯಿಯರಿಬ್ಬರು ಸಹಾ ಸೋತಾಪನ್ನರಾಗಿದ್ದರು. ಅವರು ನಿಬ್ಬಾಣದ ಹೊಳೆಯಲ್ಲಿ ಪ್ರವೇಶಸಿದ್ದರು. ಆದರೆ ಅವರ ಮಗನಲ್ಲಿ ತೀರ ವಿರುದ್ಧವಾದ ಗುಣಗಳು ಇದ್ದವು. ಉಪಾಸಕನು ಮಹಾದಾನಿಯು



ಮತ್ತು ಸೇವಾ ಮನೋಭಾವದವನಾಗಿದ್ದರೆ ಆತನ ಮಗ ಸಿಗಾಲನು ಅಪ್ಪಟ ಭೌತಿಕವಾದಿಯಾಗಿದ್ದನು. ಆತನ ಗುರಿಯು ಕೇವಲ ಐಶ್ವರ್ಯವನ್ನು ಸಂಗ್ರಹಿಸುವುದು ಮತ್ತು ಪ್ರಾಪಂಚಿಕ ಸುಖಗಳಲ್ಲಿ ತಲ್ಲೀನನಾಗುವಿಕೆಯೇ ಆಗಿತ್ತು. ಆತನು ಸ್ವ-ಇಚ್ಛೆ ಪ್ರವೃತ್ತಿಯವನಾಗಿದ್ದನು ಮತ್ತು ಎಂದಿಗೂ ಹಿರಿಯರನ್ನು ಆಲಿಸದವನಾಗಿದ್ದನು. ಅದೇವೇಳೆಯಲ್ಲಿ ಆತನ ತಂದೆಯಂತು ವಿನಮ್ರತೆಯ ಸಾಕಾರ ಮೂರ್ತಿಯೇ ಆಗಿದ್ದನು. ಶ್ರೀಮಂತನು, ವೃದ್ಧನು ಆಗಿದ್ದ ಉಪಾಸಕನು ತನ್ನ ಮಗನನ್ನು ಸರಿಹಾದಿಗೆ ತರುವುದು ಹೇಗೆಂದು ಯೋಚಿಸುತ್ತಿದ್ದನು. ಆತನು ಮಗನನ್ನು ಬುದ್ಧರ ಬಳಿಗೆ ಕರೆತರಲು ಅನೇಕಬಾರಿ ಪ್ರಯತ್ನಿಸಿ ವಿಫಲವಾಗಿದ್ದನು. ಆದರೆ ಸಿಗಾಲನಿಗೆ ಪರಮಾರ್ಥದ ಮೌಲ್ಯಗಳ ಬಗ್ಗೆ ಆಸಕ್ತಿಯೇ ಇರಲಿಲ್ಲ. ಮಗನನ್ನು ಸರಿಹಾದಿಗೆ ತರುವುದು ಹೇಗೆಂದು ಯೋಚಿಸುತ್ತಿದ್ದನು. ಆತನು ಮಗನನ್ನು ಬುದ್ಧರ ಬಳಿಗೆ ಕರೆತರಲು ಅನೇಕಬಾರಿ ಪ್ರಯತ್ನಿಸಿ ವಿಫಲವಾಗಿದ್ದನು. ಆದರೆ ಸಿಗಾಲನಿಗೆ ಪರಮಾರ್ಥದ ಮೌಲ್ಯಗಳ ಬಗ್ಗೆ ಆಸಕ್ತಿಯೇ ಇರಲಿಲ್ಲ. ಮಗನನ್ನು ಯೋಗ್ಯಹಾದಿಗೆ ತರಲೇಬೇಕೆಂದು ಆ ಶ್ರದ್ಧೋಪಾಸಕನು ಮೃತ್ಯುವಿನ ಹಾಸಿಗೆಯಲ್ಲಿದ್ದಾಗಲೂ ಒಂದು ಉಪಾಯವನ್ನು ಯೋಚಿಸಿದನು.

ಆ ಉಪಾಸಕನು ಸಾಯುವ ಮುಂಚೆ ತನ್ನ ಮಗನಿಗೆ ಹೀಗೆ ಹೇಳಿದನು: "ಪ್ರಿಯಪುತ್ರನೇ, ಪ್ರತಿ ಪ್ರಾತಃಕಾಲ ಬೇಗನೇ ಏಳು, ಸ್ನಾನ ಮುಗಿಸಿ, ನಿನ್ನ ಕೂದಲು ಆರುವ ಮುನ್ನವೇ ಆರು ದಿಕ್ಕುಗಳಾದ ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ, ಮೇಲೆ ಮತ್ತು ಕೆಳಗೆ ವಂದನೆ ಸಲ್ಲಿಸು". ಆಗಿನ ಕಾಲದಲ್ಲಿ ಇದು ಬಹು ಪ್ರಚಲಿತ ಆಚಾರಣೆಯಾಗಿತ್ತು. ಜನರು ಆ ದಿಕ್ಕುಗಳಲ್ಲಿರುವ ದೇವತೆಗಳು ತಮ್ಮನ್ನು ಕಾಪಾಡುವರು ಎಂದು ನಂಬಿದ್ದರು.

ಹೇಗೆ ಇದ್ದರೂ ಬಹಳಷ್ಟು ಜನರು ಅಂಧವಾಗಿ ಮತ್ತು ಮೌಢ್ಯಯುತವಾಗಿ ಈ ಆಚರಣೆಯುನ್ನು ಸಂಪ್ರದಾಯದಂತೆ

ಪಾಲಿಸುತ್ತಿದ್ದರು. ಕೆಲವರು ಈ ಆಚರಣೆಯನ್ನು ಧರ್ಮದ ಭಾಗವೆಂದೇ ಭಾವಿಸುತ್ತಿದ್ದರು ಮತ್ತು ಕೆಲವರು ಆ ದಿಕ್ಕುಗಳಲ್ಲಿ ಕೆಲವು ದೇವತೆಗಳಿದ್ದಾರೆ ಅಥವಾ ಸ್ವಾಭಾವಿಕ ಬಲಗಳಿವೆ ಎಂದು ನಂಬುತ್ತಿದ್ದರು. ಯಾವಾಗ ಶ್ರೀಮಂತ ಉಪಾಸಕನು ಸತ್ತನೋ ಆಗ ಸಿಗಾಲನಿಗೆ ಅಪಾರ ದುಃಖವಾಯಿತು. ಆತನು ತಂದೆಯ ಮೇಲಿನ ಗೌರವದಿಂದಾಗಿ ತಂದೆಯ ವಚನವನ್ನು ಪಾಲಿಸಲು ಬದ್ಧನಾದನು. ಆತನು ಅದರಂತೆಯೇ ದಿಕ್ಕುಗಳಿಗೆ ಪೂಜಿಸಲು ನಿಂತನು. ಇದನ್ನು ಗಮನಿಸಿದ ಆತನ ಬಂಧುಗಳಿಗೆ ಸಮಾಧಾನವಾಯಿತು.

ಬುದ್ಧ ಭಗವಾನರು ಮಹಾಕರುಣಾ ಸಮಾಪತ್ತಿಯಲ್ಲಿ ಸಿಗಾಲನ ಅವಸ್ಥೆಯನ್ನು ಕಂಡರು. ಆತನು ಜ್ಞಾನದೆಡೆಗೆ ಪರಿವರ್ತನೆ ಹೊಂದಲು ಇಂದೇ ಸುದಿನವೆಂದು ಅರಿತರು. ಆತನ ಪ್ರಚನ್ನತೆಯನ್ನು ಅರಿತರು, ಆತನ ಭವಿಷ್ಯವನ್ನು ಸಹಾ ಕಂಡರು. ಹೀಗಾಗಿ ಭಗವಾನರು ಚೀವರ ಧರಿಸಿ, ಸಿಗಾಲನಿದ್ದಲ್ಲಿಗೆ ಹೊರಟರು.

ಬುದ್ಧ ಭಗವಾನರು ಆತನು ಇದ್ದಲ್ಲಿಗೆ ಹೋಗಿ ಹೀಗೆ ಕೇಳಿದರು: "ಯುವ ಗೃಹಸ್ಥನೇ, ಬಹುಬೇಗನೆಯೇ ಎದ್ದು ವಸ್ತ್ರಗಳು ಮತ್ತು ದೇಹವು ಒದ್ದೆಯಾಗಿರುವಾಗಲೇ ಕೈಗಳನ್ನು ಜೋಡಿಸಿ, ಹಣೆಗಿಟ್ಟು, ಹೀಗೆ ವಿಭಿನ್ನ ದಿಕ್ಕುಗಳಿಗೇಕೆ ಪೂಜಿಸುತ್ತಿದ್ದಿಯೆ?"

ಸಿಗಾಲನಿಗೆ ಆಶ್ಚರ್ಯವಾಯಿತು, ತಾನು ಏನಾದರೂ ಅರ್ಥರಹಿತ ಕಾರ್ಯವನ್ನೇನಾದರೂ ಮಾಡುತ್ತಿರಬಹುದೇ? ಎಂಬ ಸಂಶಯವು ಆಯಿತು. ಈ ಸಂಪ್ರದಾಯದ ಹಿಂದಿನ ಉದ್ದೇಶವೂ ಆತನಿಗೆ ಅರಿವಾಗಿರಲಿಲ್ಲ. ಆಗ ಆತನು ಹೀಗೆ ಯೋಚಿಸಿದನು: "ಬಹುಶಃ ಭಗವಾನ್ ಬುದ್ಧರು ನನಗೆ ಈ ಪದ್ಧತಿಯ ಹಿಂದಿನ ಉದ್ದೇಶವನ್ನು ತಿಳಿಯಪಡಿಸಲೆಂದೇ ಆಗಮಿಸಿದ್ದಾರೆ". ಹಾಗೆಯೇ ಆತನಿಗೆ ತನ್ನ ತಂದೆಯು ಒಳಿತನ್ನು ಮಾಡುವ ಉದ್ದೇಶದಿಂದಲೇ ಹೀಗೆ ಆಜ್ಞಾಪಿಸಿರಬೇಕು ಎಂದೂ ಯೋಚಿಸಿದನು.



ಹೀಗಾಗಿ ಆತನು ಬುದ್ಧ ಭಗವಾನರ ಕಾಲಿಗೆ ಬಿದ್ದು ಪ್ರಣಾಮ ಮಾಡಿ ಹೀಗೆ ಹೇಳಿದನು: "ಪರಮ ಪೂಜ್ಯ ಭಂತೆ, ನಮ್ಮ ತಂದೆಯವರು ಸಾವಿನ ಸಮೀಪದಲ್ಲಿರುವಾಗ ಹಾಸಿಗೆಯಲ್ಲಿ ಇರುವಾಗ ಹೀಗೆ ಮಾಡು ಎಂದು ಆಜ್ಞಾಪಿಸಿದ್ದಾರೆ. ನಮ್ಮ ತಂದೆಯ ಮೇಲಿನ ಗೌರವದಿಂದ ನಾನು ಈ ಸಂಪ್ರದಾಯವನ್ನು ಪಾಲಿಸುತ್ತಿದ್ದೇನೆ."

ಆಗ ಭಗವಾನರು ಹೀಗೆ ಉತ್ತರಿಸಿದರು: "ಆದರೆ ಗೃಹಪತಿ ಪುತ್ರನೇ, ಆರ್ಯರ ವಿನಯದ ಪ್ರಕಾರ ಆರು ದಿಕ್ಕುಗಳಿಗೆ ಪೂಜಿಸುವುದು ಹೀಗಲ್ಲ."

ಆಗ ಸಿಗಾಲ ಹೀಗೆ ಪ್ರಶ್ನಿಸುತ್ತಾನೆ: "ಭಗವಾನ್ ಹಾಗಾದರೆ ಆರ್ಯರ ವಿನಯದ ಪ್ರಕಾರ ಆರು ದಿಕ್ಕುಗಳನ್ನು ಪೂಜಿಸುವುದು ಹೇಗೆ? ಭಗವಾನರು ನನ್ನಮೇಲೆ ದಯೆಯಿಟ್ಟು ಬೋಧಿಸಿದರೆ ನಿಜಕ್ಕೂ ಬಹಳ ಒಳಿತಾಗುವುದು."

"ಹಾಗಾದರೆ ಗೃಹಪತಿ ಪುತ್ರ, ಜಾಗರೂಕತೆಯಿಂದ ನಾನು ಹೇಳುವುದನ್ನು ಆಲಿಸು."

ಮತ್ತು ಭಗವಾನರು ಆಗ ಅದರ ಬಗ್ಗೆ ವಿಸ್ತಾರವಾದ ಬೋಧನೆ ನೀಡಿದರು. ಅದನ್ನು ಆಗಿನಿಂದ ಸಿಗಾಲೋವಾದ ಸುತ್ತ ಎನ್ನುತ್ತಾರೆ. ಹಾಗೆಯೇ ಅದನ್ನು 'ಗಿಹಿವಿನಯ' ಎಂತಲೂ ಕರೆಯುತ್ತಾರೆ. ಅಂದರೆ "ಗೃಹಸ್ಥರಿಗಾಗಿ ನೈತಿಕ ಮತ್ತು ಧಮ್ಮದ ಶಿಕ್ಷಣ."

ಈ ಸುತ್ತವು ಗೃಹಸ್ಥರಿಗಾಗಿ ಶೀಲದ ಹಾಗು ಪರಮಾರ್ಥದ ಶಿಕ್ಷಣವನ್ನು ನೀಡುತ್ತದೆ. ಇಡೀ ಬೌದ್ಧ ಜಗತ್ತಿನಲ್ಲಿ ಇದನ್ನು ವಿಸ್ತಾರವಾಗಿ ಕಲಿಸುತ್ತಾರೆ ಮತ್ತು ಗಂಭೀರವಾಗಿ ಪಾಲನೆ ಮಾಡುತ್ತಾರೆ. ಇಲ್ಲಿ ಈ ಸುತ್ತದ ಸಂಕ್ಷಿಪ್ತ ವಿಶ್ಲೇಷಣೆಯಿದೆ.

**ಎರಡು ಲೋಕಗಳ ಮೇಲೂ ವಿಜಯ–ಇಲ್ಲಿ ಮತ್ತು ಅನಂತರವೂ.**

ಇಲ್ಲಿ ಆರು ದಿಕ್ಕುಗಳಾದ ಪೂರ್ವ, ಉತ್ತರ, ಪಶ್ಚಿಮ, ದಕ್ಷಿಣ, ಊರ್ಧ್ವ ಮತ್ತು ಅಧೋ ದಿಕ್ಕುಗಳು ಕೇವಲ ಸಂಕೇತಿಕವಾಗಿದೆ. ಅವುಗಳ ಅರ್ಥ ನಿಜಕ್ಕೂ ಈ ಕೆಳಕಂಡಂತೆ ಇದೆ.

1. ಒಬ್ಬನು ಮತ್ತು ಒಬ್ಬನ ತಾಯ್ತಂದೆಯರು
2. ಒಬ್ಬನು ಮತ್ತು ಒಬ್ಬನ ಗುರುಗಳು
3. ಒಬ್ಬನು ಮತ್ತು ಒಬ್ಬನ ಪತ್ನಿ ಮತ್ತು ಮಕ್ಕಳು
4. ಒಬ್ಬನು ಮತ್ತು ಒಬ್ಬನ ಮಿತ್ರರು ಮತ್ತು ಜೊತೆಗಾರರು
5. ಒಬ್ಬನು ಮತ್ತು ಒಬ್ಬನ ಕಾರ್ಮಿಕರು ಮತ್ತು ಸೇವಕರು
6. ಒಬ್ಬನು ಮತ್ತು ಭಿಕ್ಖುಗಳು ಹಾಗು ಪವಿತ್ರ ವ್ಯಕ್ತಿಗಳು.

ಹೀಗೆ ಇಲ್ಲಿ ಒಬ್ಬನು ಈ ಆರು ಗುಂಪಿನ ವ್ಯಕ್ತಿಗಳೊಂದಿಗೆ ಹೇಗೆ ಆದರ್ಶಯುತ ಬಾಂಧವ್ಯವಿರಬೇಕೆಂದು ಇಲ್ಲಿ ತಿಳಿಸಲಾಗಿದೆ.

ಹೀಗೆ ಇಲ್ಲಿ ಉದಾತ್ತ ಗೃಹಸ್ಥನು ಈ ಆರರ ಮೂಲ ಬಾಂಧವ್ಯವನ್ನು ನಿರ್ವಹಿಸುತ್ತ ಮತ್ತು ಪುಷ್ಠಿಗೊಳಿಸುತ್ತ ಪರಮಾರ್ಥದ ಪಥದಲ್ಲಿ ಪ್ರವೇಶಿಸುತ್ತಾನೆ ಮತ್ತು ಅದರಿಂದಾಗಿ ಆತನಿಗೆ ಎರಡು ಲೋಕಗಳಲ್ಲಿ ವಿಜಯ ಪ್ರಾಪ್ತಿಯಾಗುವುದು. ಅಂದರೆ ಭೌತಿಕ ಜಗತ್ತಿನಲ್ಲಿ ಐಶ್ವರ್ಯ, ಸುಖಗಳನ್ನು ಪಡೆದು, ಪರಲೋಕದಲ್ಲಿ ಧಮ್ಮದ ಮಾನಸಿಕ ವಿಕಾಸಕ್ಕೆ ಅನುಕೂಲವಾಗುವಂತಹ ಜನ್ಮ ಪಡೆಯುವ ಹಾಗೇ ಅಥವಾ ನಿಬ್ಬಾಣ ಪಡೆಯಲು ಅನುಕೂಲವಾಗುವ ಹಾಗೆ ಜೀವಿಸುತ್ತ ಯಶಸ್ವಿಯಾಗುತ್ತಾನೆ. ಹೀಗೆ ಆತನು ದಿವ್ಯವಾದ ಉನ್ನತ ಲೋಕದಲ್ಲಿ ಜನಿಸುತ್ತಾನೆ ಮತ್ತು ಅಲ್ಲಿಂದ ನಿಬ್ಬಾಣ ಪ್ರಾಪ್ತಿಯಾಗುವಂತೆ, ವಿಮುಕ್ತಿ ಗಳಿಸುವಂತೆ ವಿಜಯಿಯಾಗುತ್ತಾನೆ.

ಆ ಸುತ್ತದಲ್ಲಿ 14 ಪಾಪಹಾದಿಗಳನ್ನು ತಡೆಯುವುದು ಇದೆ. ಅವೆಂದರೆ:

1. ಆತನು ನಾಲ್ಕು ಕರ್ಮ ಕ್ಲೇಶಗಳನ್ನು ವರ್ಜಿಸುತ್ತಾನೆ. ಅವೆಂದರೆ ಜೀವಹತ್ಯೆ, ಕಳ್ಳತನ, ವ್ಯಭಿಚಾರ ಮತ್ತು ಸುಳ್ಳು ಹೇಳುವಿಕೆ.

2. ಆತನು ಯಾವುದೇ ಪಾಪಕೃತ್ಯಗಳಿಗೆ ಚಾಲನೆ ನೀಡುವ ನಾಲ್ಕು ಪಾಪ ಪ್ರೇರಣೆಗಳು ಆತನಲ್ಲಿ ಇರುವುದಿಲ್ಲ. ಅವೆಂದರೆ ಲೋಭ, ದ್ವೇಷ, ಮೋಹ ಮತ್ತು ಭಯ.



3. ಆತನು ಐಶ್ವರ್ಯವನ್ನು ಹಾಳುಮಾಡುವ ಆರು ಹಾದಿಯಲ್ಲಿ ಇರುವುದಿಲ್ಲ. ಅವೆಂದರೆ: (ಅ) ಮತ್ತನ್ನುಂಟುಮಾಡುವ ಮಾದಕ ವಸ್ತುಗಳಿಗೆ (ಪಾನಿಯ) ಬಲಿಯಾಗುವುದು. (ಆ) ಅವೇಳೆಯಲ್ಲಿ ಬೀದಿಗಳಲ್ಲಿ ಅಡ್ಡಾಡುವುದು. (ಇ) ಜಾತ್ರೆಗಳಿಗೆ (ಇಂದ್ರೀಯ ಬೋಗಗಳನ್ನು ಉತ್ತೇಜಿಸುವ) ಪದೇ ಪದೇ ಭೇಟಿ ನೀಡುವುದು (ಈ) ಜೂಜಿನಲ್ಲಿ ತೊಡಗುವಿಕೆ (ಉ) ಕೆಟ್ಟ ಸಹಚರರನ್ನು ಹೊಂದಿರುವಿಕೆ (ಊ) ಸೋಮಾರಿಯಾಗುವಿಕೆ.

ಈ 14 ಪಾಪಯುತ ಹಾದಿಗಳನ್ನು ಆರ್ಯಶಿಷ್ಯನು ತಡೆಯುತ್ತಾನೆ.

ಎಲ್ಲಾ ಕರ್ಮಕ್ರಿಯೆಗಳನ್ನು ವರ್ಜಿಸುವಿಕೆಯ ಅರ್ಥವೇನೆಂದರೆ ಯಾವ ಕರ್ಮಗಳಿಂದಾಗಿ ಕ್ಲೇಶಗಳು ಉಂಟಾಗಿ, ಕ್ಲೇಶಗಳು ಹೆಚ್ಚುತ್ತವೋ ಅಂತಹ ಕರ್ಮಗಳಿಂದಾಗಿ ಮನಸ್ಸು ಕಲುಶಿತವಾಗುತ್ತದೆ. ಹೀಗಾಗಿ ಅಂತಹ ವ್ಯಕ್ತಿಗಳನ್ನು ಕರ್ಮ ಮತ್ತು ಪುನರ್ಜನ್ಮದ ಚಕ್ರದಲ್ಲೇ ಸುತ್ತಾಡುತ್ತಿರಬೇಕಾಗುತ್ತದೆ. ಅಂತಹ ಮಾನಸಿಕ ಕ್ಲೇಶಗಳಿಂದ ಒಬ್ಬನ ಮನಸ್ಸು ಮುಕ್ತವಾದಾಗ, ಸೆರೆಮನೆಯಿಂದ ಸ್ವತಂತ್ರನಾದಂತೆ ಪ್ರಾಪಂಚಿಕ ಅಸ್ತಿತ್ವದಿಂದ ವಿಮುಕ್ತನಾಗುತ್ತಾನೆ.

ಈ ಪಾಪಕ್ಲೇಶಗಳ ಕರ್ಮಗಳಿಗೆ ಪ್ರೇರಣೆ ನೀಡುವಂತಹ ಲೋಭಕ್ಕೆ, ದ್ವೇಷಕ್ಕೆ, ಮೋಹಕ್ಕೆ ಮತ್ತು ಭಯಕ್ಕೆ ವಶವಾಗದಿದ್ದಾಗ ಆತನು ದುಃಖಗಳ ಮೂಲವನ್ನೇ ಕತ್ತರಿಸಿ ಹಾಕುತ್ತಾನೆ. ಹಾಗೆಯೇ ಮೋಹಗಳ ಅಸ್ತಿತ್ವವನ್ನು ಕತ್ತರಿಸುತ್ತಾನೆ ಮತ್ತು ಐಶ್ವರ್ಯ ಹಾಳುಮಾಡುವ ಆರು ಹಾದಿಗಳಲ್ಲಿ ಆನಂದಿತನಾಗದೆ, ಮೂರ್ಖ ಮಾರ್ಗಗಳಲ್ಲಿ ಸಿಲುಕದೆ, ಒಬ್ಬನು ಪರಮಾರ್ಥಿಕ ಮೌಲ್ಯಗಳ ಮತ್ತು ಇಹದ ಉನ್ನತಿಯ ನಡುವೆ ಸಮತೋಲನ ಸಾಧಿಸುತ್ತಾನೆ. ಹೀಗೆ ಆತನು ಇಹ ಮತ್ತು ಪರ ಎರಡೂ ಲೋಕಗಳಲ್ಲೂ ವಿಜಯ ಸಾಧಿಸುತ್ತಾನೆ.

ಆರು ವಿಧದ ಬಾಂಧವ್ಯದ ನಿಜ ಅರ್ಥವೇನೆಂದರೆ ಜನರೊಂದಿಗೆ ಹಲವು ಹಾದಿಯಲ್ಲಿ, ಪೂರ್ಣ ವ್ಯಾಪ್ತಿಯಲ್ಲಿ ಸಂವಹನದಲ್ಲಿರುವುದು. ಅಂದರೆ ಆರು ವಿಧದ ಬಾಂಧವ್ಯದಲ್ಲಿ ಇಡೀ ಜಗತ್ತಿನ ಪರಸ್ಪರ ಅವಲಂಬನೆಯ ಸಹಕಾರದ ಜಾಲದ ವ್ಯವಸ್ಥೆ ಅಡಕವಾಗಿದೆ. ಅದು

“ಒಬ್ಬನು ಎಲ್ಲರಿಗಾಗಿ ಮತ್ತು ಎಲ್ಲರೂ ಒಬ್ಬನಿಗಾಗಿ” ಎಂಬ ನಿರ್ವಿವಾದ ವನ್ನು ಎತ್ತಿಹಿಡಿಯುತ್ತದೆ.

ಗೃಹಸ್ಥರಿಗೆ ಈ ಸಿಹಿವಿನಯ(ಗೃಹಸ್ಥರ ಶಿಸ್ತು)ವು ಸರ್ವರೋಗ ನಿವಾರಕ ಸಂಜೀವಿನಿಯಂತಿದೆ. ಈ ಬೋಧನೆಯು ಸರ್ವ ನಿವಾರಕ ವಾಗಿದ್ದು ಕುಶಲವನ್ನು ಮತ್ತು ಆರೋಗ್ಯಕರ ಅಸ್ತಿತ್ವವನ್ನು ಈಗಲೂ ಮತ್ತು ಮುಂದೆಯು ನೀಡುವುದು.

ಯಾವುದೆಲ್ಲವನ್ನು ಇಲ್ಲಿಯವರೆಗೆ ಹೇಳಲಾಗಿದೆಯೋ ಅದನ್ನೆಲ್ಲ ಈಗ ಕೋಷ್ಟಕದ ರೂಪದಲ್ಲಿ ಹೀಗೆ ನೀಡಲಾಗಿದೆ.

| **ಪೂರ್ವ ದಿಕ್ಕು** | |
|---|---|
| **ನಡುವಿನ ಬಾಂಧವ್ಯ** | |
| **ಮಕ್ಕಳು ಮತ್ತು ಪೋಷಕರು (ತಾಯ್ತಂದೆಯರು)** | |
| **ಮಕ್ಕಳ ಕರ್ತವ್ಯ** | 1. ಅವರಿಗೆ ಸಲುಹುವಿಕೆ<br>2. ಅವರ ಬಗೆಗಿನ ಕರ್ತವ್ಯಗಳನ್ನು ಮಾಡುವಿಕೆ<br>3. ಕುಟುಂಬದ ಪರಂಪರೆಯನ್ನು ಕಾಪಾಡುವಿಕೆ<br>4. ತನ್ನ ಆಸ್ತಿಗೆ ಅರ್ಹನಾಗಿರುವಿಕೆ<br>5. ಮೃತ ಬಾಂಧವರಿಗೆ ಆಹಾರ ಮತ್ತು ಉಡುಗೊರೆಗಳನ್ನು ಸಮರ್ಪಿಸುತ್ತ ಗೌರವಿಸುವುದು. |
| **ಪೋಷಕರು ಮತ್ತು ಮಕ್ಕಳು** | |
| **ಪೋಷಕರ ಕರ್ತವ್ಯ** | 1. ಪಾಪಗಳನ್ನು ಮಾಡದಿರುವಂತೆ ಬುದ್ಧಿವಾದ ನೀಡುವಿಕೆ<br>2. ಕುಶಲವನ್ನು ಅಥವಾ ಒಳ್ಳೆಯದನ್ನು ಮಾಡಲು ಪ್ರೋತ್ಸಾಹ<br>3. ಆತನಿಗೆ ಕೌಶಲ್ಯಯುತ ಕಲೆಗಳಲ್ಲಿ, ವಿದ್ಯೆಗಳಲ್ಲಿ ಕಲಿಯಲು ತೊಡಗಿಸುವುದು.<br>4. ಯೋಗ್ಯ ಸಂಗಾತಿಯೊಡನೆ ವಿವಾಹ ಮಾಡಿಸುವುದು<br>5. ಸಕಾಲದಲ್ಲಿ ಆಸ್ತಿಯನ್ನು ವರ್ಗಾಯಿಸುವಿಕೆ |



| **ದಕ್ಷಿಣ ದಿಕ್ಕು** | |
|---|---|
| **ನಡುವಿನ ಬಾಂಧವ್ಯ** | |
| **ಶಿಷ್ಯ ಮತ್ತು ಗುರು** | |
| **ಶಿಷ್ಯನ ಕರ್ತವ್ಯ** | 1. ಎದ್ದು ಗೌರವ ತೋರಿಸುವಿಕೆ<br>2. ಅವರಿಗಾಗಿ ಕಾಯ್ದು ಭೇಟಿ ನೀಡಿ ಸೇವೆ ಸಲ್ಲಿಸಬೇಕು.<br>3. ಅವರ ಬೋಧನೆಗಳನ್ನು ಗಮನಕೊಟ್ಟು ಕೇಳಬೇಕು.<br>4. ಅವರಿಗೆ ಪ್ರತಿಯಾಗಿ ಶುಶ್ರೂಷೆ (ಸಹಾಯ) ಮಾಡುವಿಕೆ<br>5. ಅವರ ಬೋಧನೆಗಳನ್ನು ಪೂರ್ಣವಾಗಿ ಕಲಿಯುವಿಕೆ. |
| **ಗುರು ಮತ್ತು ಶಿಷ್ಯ** | |
| **ಗುರುಗಳ ಕರ್ತವ್ಯ** | 1. ಯೋಗ್ಯ ಶಿಸ್ತು ವಿನಯವನ್ನು ಕಲಿಸುವಿಕೆ<br>2. ಆತನಿಗೆ ಅರ್ಥವಾಗದುದನ್ನು, ಚೆನ್ನಾಗಿ ಅರಿವಾಗುವಂತೆ ತಿಳಿಸುವಿಕೆ<br>3. ಪೂರ್ಣ ಶಿಕ್ಷಣ ನೀಡುವಿಕೆ ಹಾಗು ಜ್ಞಾನ ಮತ್ತು ಕೌಶಲ್ಯದಲ್ಲಿ ಪ್ರವೀಣನನ್ನಾಗಿಸುವಿಕೆ.<br>4. ಆತನಿಗೆ ಆತನ ಮಿತ್ರರನ್ನು ಪರಿಚಯಿಸುವಿಕೆ<br>5. ಪ್ರತಿಯೊಂದು ಕೋನಗಳಿಂದಲು ರಕ್ಷಣೆ ಒದಗಿಸುವಿಕೆ. |

| ಪಶ್ಚಿಮ ದಿಕ್ಕು | |
|---|---|
| ನಡುವಿನ ಬಾಂಧವ್ಯ | |
| ಪತಿ ಮತ್ತು ಪತ್ನಿ | |
| ಪತಿಯ ಕರ್ತವ್ಯ | 1. ಸೌಜನ್ಯದಿಂದಿರುವಿಕೆ<br>2. ಕೀಳಾಗಿ ಕಾಣದಿರುವಿಕೆ<br>3. ನಿಷ್ಠರಾಗಿರುವಿಕೆ (ದ್ರೋಹ ಬಗೆಯದಿರುವಿಕೆ)<br>4. ಅಧಿಕಾರವನ್ನು ನೀಡುವಿಕೆ<br>5. ಅಲಂಕಾರದ ವಸ್ತುಗಳೆಲ್ಲಾ ನೀಡುವಿಕೆ |
| ಪತ್ನಿ ಮತ್ತು ಪತಿ | |
| ಪತ್ನಿಯ ಕರ್ತವ್ಯ | 1. ಸುವ್ಯವಸ್ಥೆಯ ರೀತಿಯಲ್ಲಿ ಕೆಲಸಗಳನ್ನು ಮಾಡುವಿಕೆ<br>2. ಸುತ್ತಲಿನ ಬಂಧುಗಳೊಂದಿಗೆ ಸತ್ಕಾರ, ಆದರಿಸುವ ಪ್ರವೃತ್ತಿ<br>3. ನಿಷ್ಠರಾಗಿರುವಿಕೆ (ದ್ರೋಹ ಬಗೆಯದಿರುವಿಕೆ)<br>4. ತರುವಂತಹ ಎಲ್ಲಾ ವಸ್ತುಗಳ ರಕ್ಷಣೆ<br>5. ಪ್ರಯತ್ನಶೀಲಳಾಗಿರುವಿಕೆ ಹೊರತು ಕೆಲಸಗಳಲ್ಲಿ ಸೋಮಾರಿಯಾಗದಿರುವಿಕೆ. |



| ಉತ್ತರ ದಿಕ್ಕು | |
|---|---|
| ನಡುವಿನ ಬಾಂಧವ್ಯ | |
| ಉತ್ತಮ ಕುಲದ ವ್ಯಕ್ತಿ ಮತ್ತು ಮಿತ್ರರು | |
| ಕುಲಪುತ್ರನ ಕರ್ತವ್ಯ | 1. ದಾನಿಯಾಗಿರುವಿಕೆ<br>2. ಮಾತಿನಲ್ಲಿ ಸೌಜನ್ಯದಿಂದಿರುವಿಕೆ<br>3. ಅವರ ಕ್ಷೇಮಾಭಿವೃದ್ಧಿಗೆ ಪ್ರೋತ್ಸಾಹ<br>4. ಸಮಾನರಾಗಿ ನಡೆಸಿಕೊಳ್ಳುವಿಕೆ<br>5. ವಚನಬದ್ಧರಾಗುವಿಕೆ |
| ಮಿತ್ರರು ಮತ್ತು ಉತ್ತಮ ಕುಲದ ವ್ಯಕ್ತಿ | |
| ಮಿತ್ರನ ಕರ್ತವ್ಯ | 1. ಅಜಾಗರೂಕನಾಗಿರುವಾಗ ರಕ್ಷಿಸುವಿಕೆ<br>2. ಅಜಾಗರೂಕನಾಗಿರುವಾಗ ಆತನ ಆಸ್ತಿಯನ್ನು ರಕ್ಷಿಸುವಿಕೆ<br>3. ಭಯದಲ್ಲಿರುವಾಗ ರಕ್ಷಣೆ ನೀಡುವಿಕೆ<br>4. ಅಪಾಯದಲ್ಲಿರುವಾಗ ಕೈಬಿಡದಿರುವಿಕೆ<br>5. ಆತನ ಮಕ್ಕಳ ಬಗ್ಗೆಯು ಕಾಳಜಿ ಹೊಂದಿರುವಿಕೆ |

| ಅಧೋ ದಿಕ್ಕು | |
|---|---|
| ನಡುವಿನ ಬಾಂಧವ್ಯ | |
| ಯಜಮಾನ ಮತ್ತು ಸೇವಕರು (ಕೆಲಸಗಾರರು) | |
| ಯಜಮಾನರ ಕರ್ತವ್ಯ | 1. ಅವರ ಸಾಮರ್ಥ್ಯಕ್ಕೆ ತಕ್ಕಂತೆ ಕೆಲಸಗಳನ್ನು ನೀಡುವಿಕೆ<br>2. ಆಹಾರ ಮತ್ತು ವೇತನಗಳನ್ನು ಸಕಾಲಕ್ಕೆ ನೀಡುವಿಕೆ<br>3. ರೋಗಿಯಾಗಿದ್ದಾಗ ನೋಡಿಕೊಳ್ಳುವಿಕೆ<br>4. ಅವರೊಂದಿಗೆ ಸ್ವಾದಿಷ್ಟ ಆಹಾರಗಳನ್ನು ಹಂಚಿಕೊಳ್ಳುವಿಕೆ<br>5. ಯೋಗ್ಯ ಕಾಲದಲ್ಲಿ ವಿಶ್ರಾಂತಿ |
| ಸೇವಕರು ಮತ್ತು ಯಜಮಾನ | |
| ಸೇವಕರ ಕರ್ತವ್ಯ | 1. ಯಜಮಾನರಿಗೆ ಮುಂಚೆಯೇ ಏಳುವಿಕೆ<br>2. ಯಜಮಾನರು ಮಲಗಿದ ನಂತರ ಮಲಗುವಿಕೆ<br>3. ನೀಡಿದ್ದನ್ನು ಮಾತ್ರ ತೆಗೆದುಕೊಳ್ಳುವಿಕೆ<br>4. ತೃಪ್ತಿ ಹೊಂದುವಂತೆ ಕರ್ತವ್ಯಗಳನ್ನು ಮಾಡುವಿಕೆ<br>5. ಯಜಮಾನರ ಕೀರ್ತಿ ಹರಡಿಸುವಿಕೆ ಮತ್ತು ಅವರಿಗೆ ಸ್ತುತಿಸುವಿಕೆ |



| ಊರ್ಧ್ವ ದಿಕ್ಕು | |
|---|---|
| ನಡುವಿನ ಬಾಂಧವ್ಯ | |
| ಕುಲಪುತ್ರ ಮತ್ತು ಭಿಕ್ಖುಗಳು ಮತ್ತು ಪವಿತ್ರ ವ್ಯಕ್ತಿಗಳು | |
| ಕುಲಪುತ್ರರ ಕರ್ತವ್ಯ | 1. ಮೈತ್ರಿಯುತ (ಪ್ರೀತಿ/ಭಕ್ತಿಯುತ) ಕಾರ್ಯಗಳಿಂದ ಸೇವೆಮಾಡುತ್ತ ಪೂಜಿಸುವುದು.<br>2. ಮೈತ್ರಿಯುತ (ಪ್ರೀತಿ/ಭಕ್ತಿಯುತ) ಮಾತುಗಳಿಂದ ಸೇವೆಮಾಡುತ್ತ ಪೂಜಿಸುವುದು.<br>3. ಮೈತ್ರಿಯುತ (ಪ್ರೀತಿ/ಭಕ್ತಿಯುತ) ಯೋಚನೆಗಳಿಂದ ಸೇವೆಮಾಡುತ್ತ ಪೂಜಿಸುವುದು.<br>4. ಅವರಿಗಾಗಿ ಮನೆ ಸದಾ ತೆರೆಯುವುದು.<br>5. ಅವರಿಗೆ ಅಗತ್ಯವಾಗಿರುವುದನ್ನು ನೀಡುವುದು. |
| ಭಿಕ್ಖುಗಳು ಮತ್ತು ಕುಲಪುತ್ರ | |
| ಭಿಕ್ಖುಗಳ ಕರ್ತವ್ಯ | 1. ಪಾಪ ಮಾಡದಂತೆ ತಡೆಯುವುದು.<br>2. ಪುಣ್ಯಕರ್ಮಗಳನ್ನು ಮಾಡುವಂತೆ ಪ್ರೋತ್ಸಾಹಿಸುವುದು.<br>3. ಹೃತ್ಪೂರ್ವಕ ಆಶೀರ್ವಾದಗಳನ್ನು ನೀಡುವಿಕೆ<br>4. ಕೇಳಿದುದನ್ನು ಕಲಿಸುವಿಕೆ (ತಿಳಿಸುವಿಕೆ)<br>5. ಉನ್ನತ ಲೋಕಗಳ ಹಾದಿಯನ್ನು ತಿಳಿಸುವಿಕೆ. |

# ದೀರ್ಘಜಾನುವಿಗೆ ನೀಡಿದ ಸುತ್ತ : ಎ.8.6.4

ದೀಘಜಾನುವಿಗೆ ನೀಡಿದ ಸುತ್ತವು ಇನ್ನೊಂದು ಪ್ರಧಾನ ಸುತ್ತವಾಗಿದೆ. ಅದು ಗೃಹಸ್ಥ ಜೀವನವನ್ನು ಅರ್ಥಪೂರ್ಣವಾಗಿ ಮಾಡಲು ಅತ್ಯಂತ ಪಾಲನಾರ್ಯೋಗ್ಯ ಸೂಚನೆಗಳನ್ನು ನೀಡಿದೆ. ಈ ಸುತ್ತದಲ್ಲಿ ಒಂದೇವೇಳೆಯಲ್ಲಿ ಭೌತಿಕತೆ ಮತ್ತು ಪರಮಾರ್ಥಿಕತೆಯನ್ನು ಸಂಯೋಜಿಸಿ, ಸುಖಿ ಜೀವನವನ್ನು ನೀಡುವಂತಹ ಭರವಸೆ ನೀಡಿದೆ. ಧೀಘಜಾನುವಿಗೆ ಬ್ಯಾಘ್ಘಪಜ್ಜ ಎಂದು ಕರೆಯುತ್ತಾರೆ. ಆತನು ಕೋಲಿಯರ ಉದಾತ್ತ ವ್ಯಕ್ತಿಯಾಗಿದ್ದನು. ಗೃಹಸ್ಥರ ಎಲ್ಲಾ ಸಮಸ್ಯೆಗಳನ್ನು ಪ್ರಯೋಗಿಕವಾಗಿ ಪರಿಹರಿಸುವುದರಲ್ಲಿ ಪ್ರಖ್ಯಾತಿ ಪಡೆದಿದ್ದನು. ಆತನಿಗೆ ದೊಡ್ಡ ಕುಟುಂಬವೇ ಇತ್ತು. ಹಾಗು ಆತನಿಗೆ ಹಲವು ಮಕ್ಕಳಿದ್ದರು. ಧಮ್ಮವನ್ನು ಗಂಭೀರವಾಗಿ ಪಾಲಿಸುತ್ತ ಆತನು ಸಂವೃದ್ಧ ಜೀವನದಲ್ಲಿ ಅನುಭವಿಸುತ್ತಿದ್ದನು.

ಒಮ್ಮೆ ಆತನು ಬುದ್ಧರಲ್ಲಿ ಅರ್ಥಪೂರ್ಣ ಆನಂದಮಯ ಗೃಹಸ್ಥ ಜೀವನದ ಬಗ್ಗೆ ಬೋಧಿಸಲು ಕೋರಿಕೊಂಡನು. ಅದರಿಂದಾಗಿ ಗೃಹಸ್ಥರು ಇಲ್ಲಿಯೇ ಮತ್ತು ಈಗಲೇ ಸುಖಕ್ಷೇಮಗಳನ್ನು ಗಳಿಸುತ್ತಾರೆ. ಹಾಗೆಯೇ ಧಮ್ಮವನ್ನು ಕಟ್ಟುನಿಟ್ಟಿನಿಂದ ಪಾಲಿಸುತ್ತ ಗೃಹಸ್ಥರ ಕರ್ತವ್ಯಗಳನ್ನು ಪೂರೈಸುತ್ತಾರೆ.

ಕೋಲಿಯರು ಸಹಾ ಶಾಕ್ಯರ ರೀತಿಯಲ್ಲೇ ಕ್ಷತ್ರಿಯರಾಗಿದ್ದರು. ಆ ಎರಡು ಕುಟುಂಬಗಳು ನೆರೆಹೊರೆಯಲ್ಲಿರುತ್ತ ಬಾಂಧವ್ಯದಿಂದ ಕೂಡಿರುತ್ತಿದ್ದರು. ಹೀಗೆಯೇ ತಲೆಮಾರುಗಳವರೆಗೂ ಜೀವಿಸುತ್ತಿದ್ದರು. ಬೋಧಿಸತ್ವ ಗೋತಮರು ಸಹಾ ಶಾಕ್ಯ ಸಿಂಹಾಸನಕ್ಕೆ ಉತ್ತರಾಧಿಕಾರಿ ಆಗಿದ್ದರು. ಅವರ ತಾಯಿ ಮಹಾಮಾಯಾದೇವಿ ಮತ್ತು ಚಿಕ್ಕಮ್ಮರಾದ ಮಹಾಪಜಾಪತಿ ಗೋತಮಿ ಇವರಿಬ್ಬರು ಸಹಾ ಕೋಲಿಯ ರಾಜ್ಯವಂಶಕ್ಕೆ



ಸೇರಿದವರಾಗಿದ್ದರು. ಅಷ್ಟೇ ಅಲ್ಲ, ಬೋಧಿಸತ್ವ ಸಿದ್ಧಾರ್ಥ ಗೋತಮರು ವಿವಾಹವಾದ ರಾಜಕುಮಾರಿ ಯಸೋಧರಾ ಸಹಾ ಕೋಲಿಯ ವಂಶದವರೇ ಆಗಿದ್ದರು. ಮುಂದೆ ಬೋಧಿಸತ್ವ ಸಿದ್ಧಾರ್ಥ ಗೋತಮರು ಬುದ್ಧರಾದ ಮೇಲೆ ಅವರು ಕೋಲಿಯರ ದೇಶಕ್ಕೆ ಹಲವುಬಾರಿ ಅಪಾರ ಭಿಕ್ಖು ಸಂಘದ ಸಮೇತ ಧಮ್ಮವನ್ನು ಬೋಧಿಸಲು ಹೋಗಿದ್ದರು. ಒಮ್ಮೆ ಕಕ್ಕರಪತ್ತ ಎಂಬ ಕೋಲಿಯರ ನಗರದಲ್ಲಿ ತಂಗಿದ್ದರು.

ಈಗ ದೀಘಜಾನು ಎಂಬ ಕೋಲಿಯ ಶ್ರೀಮಂತ ಸದ್‌ಗೃಹಸ್ಥನು ಬುದ್ಧರ ಬಳಿಗೆ ಬಂದು ಭಗವಾನರಿಗೆ ವಂದಿಸಿ ಒಂದು ಪಕ್ಕದಲ್ಲಿ ಕುಳಿತು ಹೀಗೆ ಹೇಳುತ್ತಾನೆ. "ಭಗವಾನ್ ಗೃಹಸ್ಥರಾದ ನಾವು ಪತ್ನಿ ಮತ್ತು ಮಕ್ಕಳು ಹಾಗು ಕೆಲಸಗಾರರೊಂದಿಗೆ ಮನೆಯಲ್ಲಿರುವವರು. ನಾವು ಪ್ರಾಪಂಚಿಕ ಸುಖಗಳನ್ನು ಮತ್ತು ಸ್ವತ್ತುಗಳನ್ನು ಆನಂದಿಸುವವರು. ಅವೆಂದರೆ ಬೆಲೆಬಾಳುವ ಆಭರಣಗಳು, ಸುಗಂಧ ದ್ರವ್ಯಗಳು, ಶೃಂಗಾರ ಸಾಮಗ್ರಿಗಳು, ಕಾಶಿಯ ರೇಷ್ಮೆ ವಸ್ತ್ರಗಳು ಇತ್ಯಾದಿ. ನಾವು ಹಣವನ್ನು ಬಳಸುತ್ತೇವೆ. ಹೀಗಾಗಿ ನಮ್ಮಂತಹ ಜನರು ಎಲ್ಲಾ ಪ್ರಾಪಂಚಿಕ ಸಮಾವೇಶಗಳಲ್ಲಿ ಮತ್ತು ಹೊಣೆಗಾರಿಕೆಗಳಲ್ಲಿ ಇರುವವರು ಆಗಿದ್ದೇವೆ. ಭಗವಾನ್ ನಾವು ನಮ್ಮ ಪ್ರಾಪಂಚಿಕ ಕರ್ತವ್ಯಗಳನ್ನು ಪೂರೈಸುತ್ತಲೇ ಪರಮಾರ್ಥದಲ್ಲೂ ನಾವು ಪ್ರಗತಿಯಾಗಬಹುದೆ? ಭಗವಾನರು ನಮಗೆ ಗೃಹಸ್ಥ ಕರ್ತವ್ಯಗಳ ಜೊತೆಗೆ ಪರಮಾರ್ಥ ಪ್ರಗತಿಯಿಂದ ಕೂಡಿದ ಪಾಲನಾಯೋಗ್ಯ ಬೋಧನೆಯನ್ನು ನೀಡಿದರೆ ಒಳಿತಾಗುವುದು.

ಆಗ ಭಗವಾನರು ಬ್ಯಾಘ್ಘಪಜ್ಜನಿಗೆ ಹೀಗೆ ಹೇಳಿದರು: "ಹೌದು ಬ್ಯಾಘ್ಘಪಜ್ಜ, ನಾಲ್ಕು ವಿಷಯಗಳಿವೆ. ಅವುಗಳಿಂದ ಗೃಹಸ್ಥನು ಇಲ್ಲಿ ಈಗಲೇ ಸುಖಿಯಾಗಿ ಮತ್ತು ಕ್ಷೇಮವಾಗಿ ಇರುವನು, ಹಾಗೆಯೇ ಮುಂದಿನ ಜನ್ಮಗಳಲ್ಲಿಯೂ ಸುಖಕ್ಷೇಮವಾಗಿ ಇರುವರು."

ಭಗವಾನರು ಆಗ ಇಹಲೋಕದಲ್ಲೂ ಮತ್ತು ಪರಲೋಕದಲ್ಲೂ ಯಶಸ್ವಿಯಾಗಲು ಬೇಕಾಗಿರುವ 4 ವಿಷಯಗಳು ತಿಳಿಸಿದರು.

1. ಪ್ರಯತ್ನಶೀಲತೆಯಿಂದ ಕೂಡಿರುವುದು (ಉತ್ಥಾನ ಸಂಪದಾ)
2. ತನ್ನ ಸ್ವತ್ತುಗಳ ರಕ್ಷಣೆ ಮಾಡುವಿಕೆ (ಆರಕ್ಖಾ ಸಂಪದಾ)
3. ಸನ್ಮಿತ್ರರೊಂದಿಗೆ ಮಿತ್ರತ್ವ ವೃದ್ಧಿಸುವಿಕೆ (ಕಲ್ಯಾಣ ಮಿತ್ತತಾ)
4. ಸಮತೋಲಿತ ಜೀವನದಿಂದ ಜೀವಿಸುವುದು. ಅಂದರೆ ತನ್ನ ಆದಾಯ (ಸಂಪಾದನೆ) ಮತ್ತು ಖರ್ಚುಗಳನ್ನು ಚೆನ್ನಾಗಿ ಅರಿತು ಕೌಶಲ್ಯದಿಂದ ಸಮತೋಲಿತವಾಗಿ ನಿರ್ವಹಿಸುವುದು.

## ಸುತ್ತದ ಅನುವಾದ ಇಲ್ಲಿದೆ

"ಒಮ್ಮೆ ಭಗವಾನರು ಕೋಲಿಯರೊಂದಿಗೆ ಕಕ್ಕರಪತ್ತದಲ್ಲಿ ಕೋಲಿಯರ ನಗರದಲ್ಲಿ ತಂಗಿದ್ದರು. ಆಗ ದೀಘಜಾನು ಎಂಬ ಕೋಲಿಯರ ಗೃಹಸ್ಥನು ಭಗವಾನರ ಸಮೀಪಕ್ಕೆ ಬಂದು ವಂದಿಸಿ ಒಂದೆಡೆ ಪಕ್ಕದಲ್ಲಿ ಕುಳಿತನು. ನಂತರ ಭಗವಾನರೊಂದಿಗೆ ಹೀಗೆಂದನು: "ಪರಮಪೂಜ್ಯ ಭಂತೆ, ಗೃಹಸ್ಥರಾದ ನಾವು ಪತ್ನಿ–ಪುತ್ರರು ಹಾಗು ಸೇವಕರೊಂದಿಗೆ ವಾಸಿಸುತ್ತೇವೆ. ಇಂದ್ರೀಯ ಬೋಗದಲ್ಲಿ ಆನಂದಿಸುತ್ತೇವೆ. ವೈಭೋಗದಲ್ಲಿ ಜೀವಿಸುತ್ತೇವೆ. ಉದಾಹರಿಸುವುದಾದರೆ ಕಾಶಿಯ ರೇಷ್ಮೆ, ಗಂಧ, ಸುಗಂಧ ದ್ರವ್ಯಗಳು, ಮಾಲಾಧಾರಣೆ, ಶೃಂಗಾರ ಸಾಮಗ್ರಿಗಳು, ಚಿನ್ನ ಮತ್ತು ಬೆಳ್ಳಿಯನ್ನು ಬಳಸುವಿಕೆ ಇತ್ಯಾದಿ. ಭಗವಾನರು ಇಹಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಸುಖ ಮತ್ತು ಕ್ಷೇಮ ತರುವಂತಹ ಧಮ್ಮವನ್ನು ತಿಳಿಸಬೇಕಾಗಿ ವಿನಂತಿ."

"ಬ್ಯಾಘ್ಘಪಜ್ಜ ಅಂತಹ ನಾಲ್ಕು ವಿಷಯಗಳಿವೆ. ಅವುಗಳಿಂದಾಗಿ ಗೃಹಸ್ಥನು ಈ ಜೀವಿತದಲ್ಲೇ ಸುಖವನ್ನು ಮತ್ತು ಕ್ಷೇಮವನ್ನು ಗಳಿಸುವನು, ಯಾವುವವು?

1. ಪ್ರಯತ್ನಶೀಲತೆಯಿಂದಿರುವುದು.
2. ಸ್ವತ್ತುಗಳ ರಕ್ಷಣೆ ಮಾಡುವುದು.



3. ಕಲ್ಯಾಣ ಮಿತ್ರರನ್ನು ಹೊಂದಿರುವುದು.
4. ಸಮತೋಲಿತ ಜೀವನ ಮಾಡುವುದು.

"ಮತ್ತು ಯಾವ ಅರ್ಥದಲ್ಲಿ ಆತನು ಪ್ರಯತ್ನಶೀಲತೆಯಿಂದ ಕೂಡಿರುತ್ತಾನೆ? ಇಲ್ಲಿ ಬ್ಯಾಘ್ಘಪಜ್ಜ ಗೃಹಸ್ಥನು ಯಾವ ವಿಧದಿಂದಲು ಸಂಪಾದಿಸಬಹುದು. ಅಂದರೆ ಕೃಷಿಕನಾಗಿರಬಹುದು, ವ್ಯಾಪಾರಿಯಾಗಿರಬಹುದು, ಪಶುಪಾಲನೆ ಮಾಡಬಹುದು, ಕ್ಷತ್ರಿಯನಾಗಿರಬಹುದು, ಅಧಿಕಾರಿಯಾಗಿರಬಹುದು ಅಥವಾ ಇನ್ನಾವುದೇ ವೃತ್ತಿಯಲ್ಲಿರಬಹುದು. ಆ ವೃತ್ತಿಯಲ್ಲಿ ಆತನು ಕುಶಲಿಯಾಗಿರಬೇಕು ಮತ್ತು ಪ್ರಯತ್ನಶೀಲತೆಯಿಂದಿರಬೇಕು. ಆತನು ಯೋಗ್ಯವಾದ ವಿಧಾನವನ್ನು ಶೋಧಿಸಿ, ಅದನ್ನು ಅನ್ವಯಿಸಿ, ಪ್ರತಿಯೊಂದನ್ನು ಸುವ್ಯವಸ್ಥೆಯಲ್ಲಿರಿಸಬೇಕು. ಇದನ್ನೇ ಪ್ರಯತ್ನಶೀಲತೆಯಿಂದ ಕೂಡಿರುವಿಕೆ ಎನ್ನುತ್ತಾರೆ."

"ಯಾವುದನ್ನು 'ರಕ್ಷಣೆ' ಎನ್ನುತ್ತಾರೆ? ಇಲ್ಲಿ ಬ್ಯಾಘ್ಘಪಜ್ಜಾ, ಗೃಹಸ್ಥನು ರಕ್ಷಣಾ ಉಪಾಯಗಳನ್ನು ಸಿದ್ಧಗೊಳಿಸಿಕೊಳ್ಳುತ್ತಾನೆ. ಹೇಗೆಂದರೆ ಆತನು ನಿರಂತರ ಪ್ರಯತ್ನಶೀಲತೆಯಿಂದ ಮತ್ತು ತನ್ನ ಶಕ್ತಿಯಿಂದ ಐಶ್ವರ್ಯವನ್ನು ಸಂಗ್ರಹಿಸಿರುತ್ತಾನೆ. ಹುಬ್ಬುಗಳು ಬೆವರಿರುವ ಹಾಗೆ ಶ್ರಮಿಸಿರುತ್ತಾನೆ. ಯೋಗ್ಯವಾಗಿ ಗಳಿಸಿರುತ್ತಾನೆ. ಹಾಗು ಹೀಗೂ ಯೋಚಿಸಿರುತ್ತಾನೆ. "ನಾನು ಇದನ್ನು ಕಳ್ಳರಿಂದ ರಕ್ಷಿಸಬೇಕು ಅಥವಾ ರಾಜರಿಂದಲು ರಕ್ಷಿಸಬೇಕು. ಬೆಂಕಿಗೆ ಬೀಳದಂತೆ, ಪ್ರವಾಹಕ್ಕೆ ಬಲಿಯಾಗದಿರುವ ಹಾಗೇ ಮತ್ತು ಅಯೋಗ್ಯ ಅಪಾತ್ರ ಉತ್ತರಾಧಿಕಾರಿಗಳಿಗೆ ಸಿಗದಂತೆ ಕಾಪಾಡಬೇಕಾಗಿದೆ" ಇದನ್ನೇ ರಕ್ಷಣೆ ಹೊಂದುವಿಕೆ ಎನ್ನುತ್ತಾರೆ."

"ಕಲ್ಯಾಣ ಮಿತ್ರರನ್ನು ಹೊಂದುವಿಕೆ ಎಂದರೇನು? ಇಲ್ಲಿ ಬ್ಯಾಘ್ಘಪಜ್ಜಾ, ಗೃಹಸ್ಥನು ಯಾವ ಹಳ್ಳಿಯಲ್ಲೇ ಆಗಲಿ ಅಥವಾ ನಗರದಲ್ಲೇ ಆಗಲಿ ವಾಸಿಸುವಾಗ ಶ್ರದ್ಧೆಯಿಂದ, ಶೀಲದಿಂದ, ದಾನಶೀಲತೆಯಿಂದ ಮತ್ತು ಪ್ರಜ್ಞಾದಿಂದ ಕೂಡಿರುವಂತಹ ಗೃಹಸ್ಥರ ಮಿತ್ರತ್ವವನ್ನೇ ಮಾಡಲಿ ಅಥವಾ ಅಂತಹವರ ಮಕ್ಕಳೊಂದಿಗೆ ಸ್ನೇಹ ಮಾಡಲಿ ಅವರು ಯುವಕರೇ

ಆಗಲಿ ಅಥವಾ ವೃದ್ಧರೇ ಆಗಿರಲಿ ಅವರಲ್ಲಿ ಈ ನಾಲ್ಕು ಗುಣಗಳಿರಬೇಕು. ಅಂತಹವರೊಂದಿಗೆ ಮಾತನಾಡಿಸಲು, ಚರ್ಚಿಸಲಿ, ಅವರ ಸದ್ಗುಣಗಳಾದ ಶ್ರದ್ಧೆ, ಶೀಲ, ದಾನಶೀಲತೆ ಮತ್ತು ಪ್ರಜ್ಞಾವನ್ನೇ ಅನುಕರಿಸಲಿ, ಇದನ್ನೇ ಕಲ್ಯಾಣ ಮಿತ್ರರನ್ನು ಹೊಂದಿರುವುದು ಎನ್ನುತ್ತಾರೆ.

"ಯಾವುದನ್ನು ಸಮತೋಲನ ಜೀವನ ನಡೆಸುವಿಕೆ ಎನ್ನುತ್ತಾರೆ? ಇಲ್ಲಿ ಬ್ಯಾಘ್ಘಪಜ್ಜಾ, ಗೃಹಸ್ಥರು ತನ್ನ ಸಂಪಾದನೆ (ಆದಾಯ) ಹಾಗು ಖರ್ಚುಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡಿರುತ್ತಾನೆ. ಸಮತೋಲಿತ ಜೀವನ ನಿರ್ವಹಣೆಯನ್ನು ಅರಿತಿರುತ್ತಾನೆ. ಹೀಗಾಗಿ ಆತನು ಯಾವುದನ್ನೂ ವ್ಯರ್ಥಮಾಡದೆ, ಹಾಗೆಯೇ ದುಃಖಿತನಾಗದೆ ಇರುತ್ತಾನೆ. ಹೇಗೆಂದರೆ ಆತನು ಖರ್ಚಿಗಿಂತ ಹೆಚ್ಚು ಸಂಪಾದನೆ ಮಾಡುತ್ತಾನೆ. ಹೊರತು ಸಂಪಾದನೆಗಿಂತ ಹೆಚ್ಚು ಖರ್ಚು ಮಾಡಲಾರ. ಹೇಗೆ ಅಕ್ಕಸಾಲಿಗನು ಅಥವಾ ಆತನ ಸಹಾಯಕನು ತಕ್ಕಡಿಯನ್ನು ಹಿಡಿದು 'ಇದನ್ನು ಇಷ್ಟರಲ್ಲೇ ಅದ್ದಬೇಕು ಅಥವಾ ಇದನ್ನು ಮಾತ್ರ ಹಾಕಿ ಬಾಗಿಸಬೇಕು' ಎಂದು ಸಮತೋಲಿತ ಕ್ರಿಯೆ ಮಾಡುವಂತೆ ಜೀವನ ನಡೆಸಬೇಕು."

"ಈ ರೀತಿಯಾಗಿ ಆದಾಯ ಮತ್ತು ಖರ್ಚುಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡು ಸಮತೋಲಿತ ಜೀವನ ನಡೆಸುತ್ತಾನೆ. ಹೀಗಾಗಿ ಆತನು ವ್ಯರ್ಥವೂ ಮಾಡದೆ, ದುಃಖಿತನೂ ಆಗದೆ ಹೀಗೆ ಚಿಂತಿಸುತ್ತಾನೆ. 'ನನ್ನ ಸಂಪಾದನೆ ನನ್ನ ಖರ್ಚಿಗಿಂತ ಬಹುಪಟ್ಟು ಆಗುವಂತಾಗಲಿ, ಹೊರತು ನನ್ನ ಖರ್ಚು ಸಂಪಾದನೆಗಿಂತ ಹೆಚ್ಚಾಗದಿರಲಿ. ಅಲ್ಪ ಆದಾಯದವನಾಗಿಯು ಗೃಹಸ್ಥನು ವ್ಯರ್ಥಮಾಡುವವನಾಗಿದ್ದರೆ, ಆಗ ಜನರು ಹೀಗೆ ಹೇಳುತ್ತಾರೆ, 'ಈ ಗೃಹಸ್ಥನು ಅತ್ತಿ ಹಣ್ಣು ತಿಂದು ಜೀವಿಸುತ್ತಿರುವವನು' (ಅತಿ ಖರ್ಚಿಗೆ ಉಪಮೆಯಾಗಿದೆ). ಒಂದುವೇಳೆ ಗೃಹಸ್ಥನು ಅತಿ ಆದಾಯವುಳ್ಳವನಾಗಿಯು ಜಿಪುಣತನದ ಜೀವನ ಮಾಡುವವನಾಗಿದ್ದರೆ ಆಗ ಆತನಿಗೆ ಜನರು ಹೀಗೆ ಹೇಳುತ್ತಾರೆ: 'ಈ ಗೃಹಸ್ಥನು ಬೆಳವಣಿಗೆಯಾಗದೆಯೇ ಸಾಯುತ್ತಾನೆ' ಎನ್ನುವರು



(ಜಿಪುಣತನದ ಬಡಜೀವನ ನಡೆಸುವವರಿಗೆ ಉಲ್ಲೇಖವಾಗಿದೆ). ಹೀಗೆ ತನ್ನ ಸಂಪಾದನೆ ಮತ್ತು ಖರ್ಚನ್ನು ಸ್ಪಷ್ಟವಾಗಿ ಅರಿತುಕೊಂಡು ಗೃಹಸ್ಥನು ಸಮತೋಲಿತ ಜೀವನವನ್ನು ನಡೆಸುತ್ತಾನೆ. ಹೇಗೆಂದರೆ ಅತಿ ಖರ್ಚು ಮಾಡದೆ ಹಾಗೆಯೇ ಜಿಪುಣನು ಆಗದೆ ಸಮತೋಲನೆ ಸಾಧಿಸುತ್ತಾನೆ. ಆತನು ಹೀಗೆ ಯೋಚಿಸುತ್ತಾನೆ: 'ಇದು ನನ್ನ ಸಂಪಾದನೆ, ಇದು ನನ್ನ ಖರ್ಚು ಮತ್ತು ನನ್ನ ಖರ್ಚು ಸಂಪಾದನೆಗಿಂತ ಎಂದಿಗೂ ಹೆಚ್ಚಾಗದಿರಲಿ' ಹೀಗೆ ಬ್ಯಾಘ್ಘಪಜ್ಜ ಗೃಹಸ್ಥನು ಸಮತೋಲಿತ ಜೀವನ ನಡೆಸುತ್ತಾನೆ."

"ಬ್ಯಾಘ್ಘಪಜ್ಜ, ಹೀಗೆ ಸಂಗ್ರಹಿತವಾದ ಐಶ್ವರ್ಯವು ನಾಲ್ಕು ಮೂಲಗಳಲ್ಲಿ ಹಾಳಾಗುತ್ತದೆ. ಅವೆಂದರೆ: ವ್ಯಭಿಚಾರದಿಂದಾಗಿ, ಮಧ್ಯಪಾನದಿಂದಾಗಿ, ಜೂಜಿನಿಂದಾಗಿ ಮತ್ತು ಪಾಪಿ ಸ್ನೇಹಿತರಿಂದಾಗಿ (ಪಾಪಿ ಸಹಚರರಿಂದಾಗಿ ಮತ್ತು ಪಾಪ ಸಂಘದಿಂದಾಗಿ), ಹೇಗೆಂದರೆ ಒಂದು ದೊಡ್ಡ ನೀರಿನ ತೊಟ್ಟಿಗೆ ಅಥವಾ ಕೆರೆಗೆ ನಾಲ್ಕು ಒಳಮಾರ್ಗಗಳನ್ನು ಹಾಗು ನಾಲ್ಕು ಹೊರ ಮಾರ್ಗಗಳು ಇರುತ್ತವೆ. ಒಬ್ಬ ವ್ಯಕ್ತಿಯು ಇಲ್ಲಿ ಒಳಮಾರ್ಗಗಳನ್ನು ಮುಚ್ಚಿ ಹೊರ ಮಾರ್ಗಗಳನ್ನು ತೆರೆದುಬಿಟ್ಟರೆ, ಆಗ ಮಳೆಯು ಇಲ್ಲದಿದ್ದರೆ, ಆಗ ಕೇವಲ ಕ್ಷೀಣತೆಯನ್ನು ನಿರೀಕ್ಷಿಸಬಹುದು ಹೊರತು ವೃದ್ಧಿಯನ್ನಲ್ಲ. ಅದೇರೀತಿಯಾಗಿ ಸಂಗ್ರಹಗೊಂಡ ಐಶ್ವರ್ಯವು ನಾಲ್ಕು ಮೂಲಗಳಿಂದ ಹಾಳಾಗುತ್ತದೆ. ಅಂದರೆ ವ್ಯಭಿಚಾರದಿಂದ, ಮದ್ಯಪಾನದಿಂದ, ಜೂಜಿನಿಂದ ಮತ್ತು ಪಾಪಿ ಸ್ನೇಹಿತರಿಂದ ನಾಶವಾಗುತ್ತದೆ."

"ಅದೇರೀತಿಯಾಗಿ ನಾಲ್ಕು ವಿಧದಿಂದಾಗಿ ಸಂಗ್ರಹವಾಗಿರುವ ಐಶ್ವರ್ಯವು ವೃದ್ಧಿಯಾಗುತ್ತದೆ. ಹೇಗೆಂದರೆ ವ್ಯಭಿಚಾರದ ವರ್ಜನೆಯಿಂದ, ಮದ್ಯಪಾನದ ವರ್ಜನೆಯಿಂದ, ಜೂಜಿನ ವರ್ಜನೆಯಿಂದ ಮತ್ತು ಪಾಪಿ ಸ್ನೇಹಿತರನ್ನು ತೊರೆಯುವುದರಿಂದಾಗಿ, ಹೇಗೆಂದರೆ ಬೃಹತ್ ನೀರಿನ ತೊಟ್ಟಿಗೆ ನಾಲ್ಕು ಒಳಮಾರ್ಗಗಳು ಹಾಗು ನಾಲ್ಕು ಹೊರ ಮಾರ್ಗಗಳು ಇರುತ್ತವೆ. ಇಲ್ಲಿ ವ್ಯಕ್ತಿಯೊಬ್ಬ ನಾಲ್ಕು ಹೊರ ಮಾರ್ಗಗಳನ್ನು ಮುಚ್ಚಿ, ನಾಲ್ಕು ಒಳಮಾರ್ಗಗಳನ್ನು ತೆರೆದಾಗ ಮತ್ತು ಮಳೆಯು ಬಿದ್ದಾಗ ಆಗ ಕೇವಲ

ಸಂವೃದ್ಧಿಯು ಇರುತ್ತದೆ ಹೊರತು ಕ್ಷೀಣವಲ್ಲ. ಇದನ್ನೇ ನಾವು ನಿರೀಕ್ಷಿಸಬಹುದು. ಅದೇರೀತಿಯಾಗಿ ಐಶ್ವರ್ಯವು ನಾಲ್ಕು ಮೂಲಗಳಿಂದ ಸಂಗ್ರಹವಾಗಿ ವೃದ್ಧಿಯಾಗುತ್ತದೆ. ಅಂದರೆ ವ್ಯಭಿಚಾರ ತೊರೆದಾಗ ಮದ್ಯಪಾನ ಬಿಟ್ಟಾಗ, ಜೂಜಾಡುವುದನ್ನು ನಿಲ್ಲಿಸಿದಾಗ, ಸನ್ಮಿತ್ರರನ್ನು ಹೊಂದಿರುವಾಗ ಇದು ಸಾಧ್ಯವಾಗುತ್ತದೆ."

"ಈ ನಾಲ್ಕು ವಿಷಯಗಳಿಂದಾಗಿ ಗೃಹಸ್ಥನಿಗೆ ಇಹಲೋಕದಲ್ಲಿಯೇ ಸುಖ ಮತ್ತು ಕ್ಷೇಮವು ಸಿಗುವುದು."

"ಬ್ಯಾಘ್ಘಪಜ್ಜ, ಗೃಹಸ್ಥನಿಗೆ ಪರಲೋಕದಲ್ಲಿಯು ಸುಖ ಮತ್ತು ಕ್ಷೇಮವನ್ನು ತರುವ ನಾಲ್ಕು ವಿಷಯಗಳಿವೆ ಯಾವುವವು?"

"ಶ್ರದ್ಧೆಯಿಂದಿರುವುದು, ಶೀಲವಂತನಾಗಿರುವುದು, ದಾನಿಯಾಗಿರುವುದು ಮತ್ತು ಪ್ರಜ್ಞೆಯಿಂದ ಕೂಡಿರುವುದು, ಈ ನಾಲ್ಕರಿಂದಾಗಿ ಗೃಹಸ್ಥನು ಭವಿಷ್ಯದ ಜೀವಿತದಲ್ಲೂ ಸಹಾ ಸುಖ ಮತ್ತು ಕ್ಷೇಮಗಳಿಂದ ಕೂಡಿರುತ್ತಾನೆ."

"ಶ್ರದ್ಧೆಯನ್ನು ಹೊಂದಿರುವುದು ಎಂದರೇನು? ಬ್ಯಾಘ್ಘಪಜ್ಜ, ಇಲ್ಲಿ ಗೃಹಸ್ಥನು ಶ್ರದ್ಧೆಯಿರುವವನಾಗಿರುತ್ತಾನೆ. ಆತನು ಸಮ್ಮಾ ಸಂಬುದ್ಧ ತಥಾಗತರಲ್ಲಿ ಈ ಬಗೆಯ ಅಚಲ ಶ್ರದ್ಧೆಯಿಂದ ಕೂಡಿರುತ್ತಾನೆ. "ನಿಜಕ್ಕೂ ಭಗವಾನರು, ಅರಹಂತರಾಗಿರುವವರು, ಸಮ್ಮಾ ಸಂಬುದ್ಧರು ಆಗಿರುವವರು, ವಿಜ್ಜಾಚರಣ ಸಂಪನ್ನರು (ವಿದ್ಯೆ ಹಾಗು ಆಚರಣೆಯಲ್ಲಿ ಪೂರ್ಣರು) ಆಗಿರುವವರು, ಸುಗತರು (ಸತ್ಯಶೋಧಕರು), ಲೋಕವಿದರು (ಸರ್ವ ಲೋಕಗಳ ಜ್ಞಾನಿಯು), ಅನುತ್ತರರು (ವ್ಯಕ್ತಿಗಳನ್ನು ಪಳಗಿಸುವುದರಲ್ಲಿ ಅನನ್ಯರು), ದೇವತೆಗಳಿಗೆ ಮತ್ತು ಮನುಷ್ಯರಿಗೆ ಶಾಸ್ತರು (ಗುರುಗಳು), ಬುದ್ಧರು ಮತ್ತು ಭಗವಂತರು ಆಗಿದ್ದಾರೆ" ಈ ರೀತಿಯಾಗಿ ಗೃಹಸ್ಥನು ಶ್ರದ್ಧೆಯಿಂದಿರುತ್ತಾನೆ."

"ಶೀಲವನ್ನು ಹೊಂದಿರುವುದು ಎಂದರೇನು? ಬ್ಯಾಘ್ಘಪಜ್ಜ, ಇಲ್ಲಿ ಗೃಹಸ್ಥನು ಜೀವಹತ್ಯೆಯಿಂದ, ಕಳ್ಳತನದಿಂದ, ವ್ಯಭಿಚಾರದಿಂದ, ಸುಳ್ಳಿನಿಂದ



ಮತ್ತು ಮತ್ತನ್ನುಂಟುಮಾಡುವ ಮದ್ಯಪಾನ, ಮಾದಕ ವಸ್ತುಗಳಿಂದ, ಇವೆಲ್ಲದರಿಂದ ವಿರತನಾಗಿರುತ್ತಾನೆ, ದೂರವಾಗಿರುತ್ತಾನೆ. ಶೀಲವನ್ನು ಹೊಂದಿರುವುದೆಂದರೆ ಇದೇ ಆಗಿದೆ."

"ಮತ್ತು ದಾನಶೀಲತೆ ಹೊಂದಿರುವುದು ಎಂದರೇನು? ಇಲ್ಲಿ ಬ್ಯಾಘ್ಘಪಜ್ಜ ಗೃಹಸ್ಥನು ಜಿಪುಣತನದ ಮಲದಿಂದ ಮನಸ್ಸನ್ನು ಮುಕ್ತವಾಗಿರಿಸಿರುತ್ತಾನೆ. ಆತನು ದಾನಿಯಾಗಿರುತ್ತಾನೆ. ಮುಕ್ತ ಮನಸ್ಸಿನವನಾಗಿ, ತೆರೆದ ಹಸ್ತದವನಾಗಿರುತ್ತಾನೆ, ಸದಾ ತ್ಯಾಗದಲ್ಲೆ ಆನಂದಿತನಾಗಿರುತ್ತಾನೆ. ದಾನ ನೀಡುವುದರಲ್ಲೆ ನಿಷ್ಠನಾಗಿರುತ್ತಾನೆ. ಸದಾ ಹಂಚುವಿಕೆಯಲ್ಲಿ ಮತ್ತು ದಾನ ನೀಡುವುದರಲ್ಲಿಯೇ ಆಹ್ಲಾದತೆ ಹೊಂದಿರುತ್ತಾನೆ. ಇದನ್ನೇ ದಾನಶೀಲತೆ ಹೊಂದಿರುವಿಕೆ ಎನ್ನುತ್ತಾರೆ. ಮತ್ತು ಪ್ರಜ್ಞಾವನ್ನು ಹೊಂದಿರುವಿಕೆ ಎಂದರೇನು? ಬ್ಯಾಘ್ಘಪಜ್ಜ, ಇಲ್ಲಿ ಗೃಹಸ್ಥನು ಪ್ರಜ್ಞಾವಂತನಾಗಿರುತ್ತಾನೆ, ಆತನು ಜೀವನದ ಪ್ರತಿಯೊಂದರಲ್ಲೂ ಉದಯಿಸಿ, ಬೀಳುವಂತಹ ಆಗು-ಹೋಗುವಿಕೆಯ ಅನಿತ್ಯತೆಯನ್ನು ಅರಿಯುವಂತಹವನಾಗಿದ್ದಾನೆ. ತೋರಿಕೆಯನ್ನೇ ಬೇಧಿಸಿ, ಆರ್ಯರ ನೇರ ಜ್ಞಾನವನ್ನು ಪ್ರವೇಶಿಸಿ ಅರಿಯುವಂತಹವನಾಗಿದ್ದಾನೆ. ಅದರಿಂದಾಗ ದುಃಖ ನಿರೋಧಕ್ಕೆ ಕೊಂಡೊಯ್ಯುವ ಜ್ಞಾನ ಪಡೆಯುತ್ತಾನೆ. ಇದನ್ನೇ ಪ್ರಜ್ಞಾವನ್ನು ಹೊಂದಿರುವಿಕೆ ಎನ್ನುತ್ತಾರೆ."

"ಈ ನಾಲ್ಕು ಗೃಹಸ್ಥನಿಗೆ ಪರಲೋಕದಲ್ಲಿ ಸುಖವು ಮತ್ತು ಕ್ಷೇಮವನ್ನು ಒದಗಿಸುತ್ತವೆ."

"ಪ್ರತಿ ಕ್ರಿಯೆಗಳಲ್ಲೂ ನಿರಂತರ ಯತ್ನಶೀಲನಾಗಿ, ಆತ ಸದಾ ಜಾಗರೂಕನಾಗಿ, ಸುವ್ಯವಸ್ಥಿತನಾಗಿರುತ್ತಾನೆ. ಹೀಗೆ ಆತನು ಸಮತೋಲಿತ ಜೀವನವನ್ನು ಜೀವಿಸುತ್ತಾನೆ ಮತ್ತು ತಾನು ಸಂಪಾದಿಸಿದ ಐಶ್ವರ್ಯವನ್ನು ರಕ್ಷಿಸುತ್ತಾನೆ."

"ಶ್ರದ್ಧಾ ಮತ್ತು ಶೀಲಗಳಿಂದ ಕೂಡಿದ್ದು ತಾನು ಏನು ಹೇಳುತ್ತಿರುವೆ ಎಂಬುದನ್ನು ಅರಿತಿರುತ್ತಾನೆ ಮತ್ತು ಜಿಪುಣತೆಯಿಂದ ಮುಕ್ತನಾಗಿರುತ್ತಾನೆ,

ಹೀಗಿದ್ದು ಆತ ಸದಾ ಮಾರ್ಗವನ್ನು ವಿಶುದ್ಧಗೊಳಿಸುತ್ತಾನೆ. ಅದರಿಂದಾಗಿ ಭವಿಷ್ಯದಲ್ಲಿ ಕ್ಷೇಮವು ಬರುವುದು."

"ಈ ಎಂಟು ಪರಮಾರ್ಥದ ಆಚರಣೆಗಳು ಶ್ರದ್ಧೆಯಿಂದ ಕೂಡಿರುವ ಗೃಹಸ್ಥನಿಗಾಗಿ ಇದೆ. ಇದನ್ನು ಸತ್ಯವನ್ನು ಎತ್ತಿಹಿಡಿದವನಿಗಾಗಿ ತಿಳಿಸಲಾಗಿದೆ. ಇವುಗಳು ಸುಖ ಮತ್ತು ಕ್ಷೇಮವನ್ನು ನೀಡುತ್ತವೆ. ಇಲ್ಲಿ ಈಗಲೇ, ಹಾಗೆಯೇ ಪರಲೋಕದಲ್ಲಿ (ನಂತರವೂ) ಹೀಗಾಗಿ ಗೃಹಸ್ಥರು ದಾನದಿಂದಾಗಿ ಪುಣ್ಯವನ್ನು ವೃದ್ಧಿಗೊಳಿಸುವರು.

ಬ್ಯಾಘ್ಘಪಜ್ಜನು ಅತ್ಯಂತ ಯಥೋಚಿತ ಪ್ರಶ್ನೆಯನ್ನು ಕೇಳಿದನು. ಅದು ಇಂದಿಗೂ ಪ್ರಸ್ತುತವಾದ ಪ್ರಶ್ನೆಯಾಗಿದೆ. ನೋಡಿ, ಆತನು ಹೀಗೆ ಪ್ರಶ್ನಿಸುತ್ತಾನೆ: "ಭಗವಾನ್ ಗೃಹಸ್ಥರಾದ ನಾವು ಗುಂಪಾಗಿರುವ ಮನೆಗಳಲ್ಲಿ ಸ್ತ್ರೀಯರೊಂದಿಗೆ, ಮಕ್ಕಳೊಂದಿಗೆ, ಸೇವಕರೊಂದಿಗೆ ಇರುತ್ತೇವೆ... ನಾವು ಎಲ್ಲಾಬಗೆಯ ಪ್ರಾಪಂಚಿಕ ಸುಖಗಳಲ್ಲಿ ಆನಂದಿಸುತ್ತೇವೆ. ಎಲ್ಲಾರೀತಿಯ ವೈಭೋಗದಲ್ಲಿ ರತರಾಗಿರುತ್ತೇವೆ. ಚಿನ್ನ ಮತ್ತು ಬೆಳ್ಳಿಗಳೊಂದಿಗೆ ವ್ಯವಹರಿಸುತ್ತೇವೆ ಇತ್ಯಾದಿ." ಆತನ ಅರ್ಥವೇನೆಂದರೆ ಈ ವಿಷಯಗಳು ವ್ಯಕ್ತಿಯನ್ನು ಸಂಸಾರದಲ್ಲಿ ಬಂಧಿಸಿರುತ್ತದೆ. ಹೀಗೆ ಬಂಧಿತನಾಗಿದ್ದರೂ ಸಹಾ ಧಮ್ಮವನ್ನು ಗಂಭೀರವಾಗಿ ಅಭ್ಯಸಿಸುವವನಿಗೆ ಪರಮಾರ್ಥದ ಉನ್ನತಿ ಸಾಧ್ಯವೆ? ಸಾಧ್ಯವಿದ್ದರೆ ಹೇಗೆ? ನಾವು ಹೇಗೆ ನಮ್ಮ ಕುಟುಂಬದ ಕರ್ತವ್ಯಗಳನ್ನು, ಧಮ್ಮ ಶಿಸ್ತಿನೊಂದಿಗೆ ಸಂಧಾನ ಮಾಡಿಕೊಳ್ಳಬೇಕು?"

ಕೂಡಲೇ ಭಗವಾನರು ಅತ್ಯಮೂಲ್ಯವಾದ ಧಮ್ಮವನ್ನು ವಿವರಿಸಿದರು, ನಿರ್ಧಿಷ್ಟವಾಗಿ ಎಂಟು ವಿಷಯಗಳನ್ನು ತಿಳಿಸುತ್ತ ಅದರಿಂದಾಗಿ ಈಗಲೂ ಮತ್ತು ಮುಂದೆಯೂ ಸುಖ ಮತ್ತು ಕ್ಷೇಮವನ್ನು ತರುವುದಾಗಿ ಹೇಳಿದರು. ಈ ಎಲ್ಲಾ ಎಂಟು ವಿಷಯಗಳು ಏಕಕಾಲದಲ್ಲಿಯೇ ಅಭ್ಯಸಿಸಬೇಕಾಗಿದೆ. ಒಬ್ಬನು ಪ್ರಾಪಂಚಿಕತೆಯೊಂದಿಗೆ, ಪರಮಾರ್ಥವನ್ನು ಅಭ್ಯಸಿಸಲು ನಿಂತಾಗ ಆತನು ಸಮತೋಲಿತವಾಗಿ ಹಾಗು ಪ್ರಯತ್ನಶೀಲತೆಯ ಜೀವನವನ್ನು ಆಚರಿಸಬೇಕಾಗಿದೆ.



ಭೌತಿಕವಾಗಿ ಆಗಲಿ ಅಥವಾ ಪರಮಾರ್ಥಿಕವಾಗಿ ಆಗಲಿ ಒಬ್ಬನು ಪ್ರಗತಿ ಹೊಂದಬೇಕಾದರೆ ಒಬ್ಬನು ಕೇವಲ ತನ್ನ ಸ್ವ–ಶ್ರಮವನ್ನೇ ಅವಲಂಬಿಸಬೇಕಾಗಿದೆ ಎಂದು ಬೌದ್ಧರು ನಂಬುತ್ತಾರೆ. ನಿಷ್ಠೆಯುತ ನಿರಂತರ ಪ್ರಯತ್ನದಿಂದಲೇ ಇಹ ಮತ್ತು ಪರದ ಯಶಸ್ಸು ಸಾಧ್ಯ ಹೊರತು, ಯಾವ ದೇವರಾಗಲಿ, ಯಾವ ಶಾಸ್ತ್ರವಾಗಲಿ, ಯಾವ ಗುರುವಾಗಲಿ, ಯಾವ ಬಾಹ್ಯದ ಶಕ್ತಿಯಾಗಲಿ ಒಬ್ಬನ ಜೀವನದಲ್ಲಿ ಬದಲಾವಣೆ ತರಲು ಸಾಧ್ಯವಿಲ್ಲ. ಕೇವಲ ತನ್ನ ನಿಷ್ಠೆಯುತ ಶ್ರಮದಿಂದ ಮಾತ್ರ ಒಬ್ಬನ ಪ್ರಗತಿ ಸಾಧ್ಯ ಮತ್ತು ಯಶಸ್ಸು ಆಗುತ್ತದೆ. ಯಾರೆಲ್ಲ "ದೇವರ ಇಚ್ಛೆ" ಎಂದು ಅವಲಂಬಿತರಾಗಿರುವರೋ ಅವರೆಲ್ಲರೂ ಮೋಹದಿಂದ ಆವೃತರಾಗಿದ್ದಾರೆ. ಒಬ್ಬನು ಅಪ್ರಿಯ ಸನ್ನಿವೇಶಗಳಿಂದ ಹೊರಬರಬೇಕಾದರ ಅಥವಾ ಪ್ರಿಯವಾದುದನ್ನು ಪಡೆಯಬೇಕಾದರೆ ಕೇವಲ ತನ್ನ ಯತ್ನಶೀಲತೆಯಿಂದ ಮಾತ್ರ ಗುರಿಮುಟ್ಟಲು ಸಾಧ್ಯವಾಗುತ್ತದೆ.

ತಾನು ಹುಡುಕುತ್ತಿರುವುದು ಸಿಗಬೇಕಾದರೆ, ಸಿದ್ಧಿಯಾಗಬೇಕಾದರೆ ಒಬ್ಬನು ಒಂದು ಹೆಜ್ಜೆ ಮುಂದೆಯೇ ಸಾಗಬೇಕಾಗುತ್ತದೆ ಮತ್ತು ಯಾವುದೆಲ್ಲವನ್ನು ಪ್ರಾಪ್ತಿಮಾಡಿರುತ್ತೇವೆಯೋ ಅದನ್ನು ಎಲ್ಲರ ಒಳಿತಿಗಾಗಿ ಕಾಪಾಡಬೇಕಾಗುತ್ತದೆ. ಅದು ನಮ್ಮ ಆಸಕ್ತಿಗೆ ಮಾತ್ರವಲ್ಲ, ಬದಲಾಗಿ ಎಲ್ಲರ ಒಳಿತಿಗಾಗಿ ಬಳಸಬೇಕಾಗಿದೆ.

ಬೌದ್ಧ ಧರ್ಮದಲ್ಲಿ ಸ್ವಹಿತಾಸಕ್ತಿ ಮತ್ತು ಸರ್ವರ ಹಿತಾಸಕ್ತಿ ಎಂಬ ಎರಡು ಕವಲಿಲ್ಲ. ಒಬ್ಬನು ಏನಾದರೂ ಗಳಿಸಿದರೆ ಅದು ಸರ್ವರ ಒಳಿತಿಗಾಗಿಯೆ, ನಾವು ಪರಸ್ಪರಾವಲಂಬನೆಯ ಜೀವನವನ್ನು ಜೀವಿಸುತ್ತಿದೇವೆ. ಪೂರ್ಣ ಪರಾವಲಂಬನೆ ಅಥವಾ ಪೂರ್ಣ ಸ್ವಾವಲಂಬನೆ ಎಂಬುದು ಇಲ್ಲವೇ ಇಲ್ಲ. ಜೀವನವು ಪರಸ್ಪರಾವಲಂಬನೆಯಿಂದಲೇ ಕೂಡಿರುವುದು ಸತ್ಯವಾಗಿದೆ. ಆದ್ದರಿಂದ ನಾವು ಗಳಿಸಿರುವುದು ಸರ್ವರಲ್ಲೂ ಹಂಚಬೇಕಾಗಿದೆ. ಅದು ಭೌತಿಕವಾಗಿಯೇ ಆಗಿರಲಿ ಅಥವಾ ಪರಮಾರ್ಥಿಕವಾಗಿಯೇ ಅಗಿರಲಿ ಸರ್ವರಿಗೂ ಅದನ್ನು ನೀಡಬೇಕಾಗಿದೆ.

ಥೇರವಾದ ಬುದ್ಧ ಧಮ್ಮವು ಬುದ್ಧರ ವಚನಗಳನ್ನು ಸುರಕ್ಷಿತವಾಗಿಯೇ ಸಂರಕ್ಷಿಸಿದೆ, ಅದು ಅತ್ಯಂತ ಪರಿಶುದ್ಧವಾದ ಆದಿಸ್ಥಿತಿಯಲ್ಲಿಯೇ, ಯಥಾರೂಪದಲ್ಲಿಯೇ ಜೋಪಾನವಾಗಿಟ್ಟಿದೆ. ಏಕೆಂದರೆ ಬೌದ್ಧರ ದೂರದೃಷ್ಟಿಯಿಂದಾಗಿ ಧಮ್ಮದ ಅತ್ಯಮೂಲ್ಯ ನಿಧಿಯು, ಸರ್ವಕಾಲಕ್ಕೂ ಎಲ್ಲೆಲ್ಲೂ ಸಿಗುವಂತಿರಬೇಕು, ಸಿಗಬೇಕು ಮತ್ತು ಬೋಧಿಯ ಅನ್ವೇಷಕರಿಗೆ ಲಾಭವನ್ನುಂಟು ಮಾಡಬೇಕು.

ಪರಮಾರ್ಥದಲ್ಲಿ ಪ್ರಗತಿಯಾಗಲು ಒಬ್ಬನು ಧಮ್ಮವನ್ನು ರಕ್ಷಿಸಲೇಬೇಕಾಗಿದೆ. ಏತಕ್ಕಾಗಿ ರಕ್ಷಿಸುತ್ತಿದ್ದೇವೆ ಎಂದರೆ ನಾವು ಪರಮಾರ್ಥದಲ್ಲಿ ಪ್ರಗತಿಯಾಗಬೇಕಾಗಿದೆ. ಭೌತಿಕವಾಗಿ ಯಶಸ್ಸು ಮತ್ತು ಪರಮಾರ್ಥವಾಗಿ ಪ್ರಗತಿ ಹೊಂದಲು ಧಮ್ಮಚಾರಿಗಳಂತಹ ಸಮಾನ ಮನಸ್ಕರ ಸ್ನೇಹವನ್ನು ಮಾಡಲೇಬೇಕಾಗಿದೆ. ಅದೇರೀತಿ ಪ್ರಜ್ಞಾರಹಿತವಾಗಿ ದುಶ್ಶೀಲರೊಂದಿಗೆ ಬೆರೆಯುವುದು ಇಹಕ್ಕೂ ಮತ್ತು ಪರಕ್ಕೂ ಪರಮಶತ್ರು ಪಡೆದಂತೆಯೆ.

ಅದೇರೀತಿಯಾಗಿ ಸಮತೋಲಿತ ಜೀವನವು ಅತ್ಯಗತ್ಯವಾಗಿದೆ. ಅಂದರೆ ಹಾಳು ಮಾಡಬಾರದು, ಹಾಗೆಯೇ ಜಿಪುಣನು ಆಗಬಾರದು. ಒಬ್ಬನು ತನ್ನ ಆದಾಯ ಮತ್ತು ಖರ್ಚಿನ ನಡುವೆ ಕುಶಲಯುತವಾಗಿ ಸಂಧಾನ ಮಾಡಿಕೊಳ್ಳಬೇಕಾಗಿದೆ.

ಯಶಸ್ವಿಯುತ ಭೌತಿಕ ಮತ್ತು ಪರಮಾರ್ಥದ ವಿಕಾಸಕ್ಕೆ ಈ ನಾಲ್ಕು ಅಂಗಗಳನ್ನು ಎಂದಿಗೂ ಬೇರ್ಪಡಿಸಲಾರೆವು. ಅವು ಹೆಚ್ಚು ಭಾಗದ ಜೀವನ ಕ್ರಮಕ್ಕೆ ಸುಖ ಕ್ಷೇಮವನ್ನು ಈ ಜೀವಿತದಲ್ಲಿಯೇ ನೀಡುತ್ತದೆ.

ಬೇರೆ ನಾಲ್ಕು ಅಂಗಗಳು ಭವಿಷ್ಯದ ಜೀವನಗಳಿಗೆ ಸುಖ ಮತ್ತು ಕ್ಷೇಮವನ್ನು ನೀಡುವುದು. ಮತ್ತು ಯಾವಾಗ ಮೊದಲ ನಾಲ್ಕು ಅಂಗಗಳನ್ನು ಯಶಸ್ವಿಯಾಗಿ ವೃದ್ಧಿಗೊಳಿಸುವೆವೋ, ಇತರ ನಾಲ್ಕು ಅಂಗಗಳನ್ನು ಅದೇಕಾಲಕ್ಕೆ ವೃದ್ಧಿಗೊಳಿಸಬೇಕು ಮತ್ತು ಬುದ್ಧರು ಹೇಳಿರುವುದು ಏನೆಂದರೆ



ಒಬ್ಬನು ಶ್ರದ್ಧೆ, ಶೀಲ, ದಾನಶೀಲತೆ (ತ್ಯಾಗ) ಮತ್ತು ಪ್ರಜ್ಞಾ.(ಪಞ್ಞಾ)ವನ್ನು ಹೊಂದಿರುವುದು. ಇದು ಸಾಧ್ಯವಾಗುವುದು ಯಾವಾಗ ಎಂದರೆ ಒಬ್ಬನು ಆರ್ಯ ಅಷ್ಟಾಂಗ ಮಾರ್ಗವನ್ನು ಹಂತಹಂತವಾಗಿ ಪಾಲಿಸಿದಾಗ ಆತನ ಶೀಲ, ಸಮಾಧಿ ಮತ್ತು ಪ್ರಜ್ಞಾದ ವಿಕಾಸವಾಗುವುದು.

ಆದ್ದರಿಂದ ಪಂಚಶೀಲವನ್ನು ಪಾಲಿಸದೆ ಬೇರೆ ಹಾದಿಯೇ ಇಲ್ಲ. ಮುಂದೆ ಒಬ್ಬನು ಧ್ಯಾನಾಭ್ಯಾಸವನ್ನು ಸಹಾ ಪ್ರತಿನಿತ್ಯ ಮುಂಜಾನೆ ಮತ್ತು ಸಂಜೆ ಪಾಲಿಸುವುದು ವಿಹಿತವಾಗಿದೆ.

ಹೇಗೆ ಒಬ್ಬನು ಧ್ಯಾನವನ್ನು ಮುಂದುವರೆಸುತ್ತಾನೋ, ಆಗ ಆತನ ಆಂತರ್ಯದ ಶಕ್ತಿಯು ನಿರ್ಮಾಣವಾಗಿ ಅದು ಚಿತ್ತಪರಿಶುದ್ಧತೆಯೆಡೆಗೆ ಕರೆದೊಯ್ಯುತ್ತದೆ. ಈ ಪಞ್ಞಾವು ವಿಕಸಿತವಾಗಿ ಜೀವನದ ಮತ್ತು ಸುತ್ತಲಿನ ಜಗತ್ತಿನ ವಾಸ್ತವಿಕತೆಗಳು ಅರಿವಾಗುತ್ತದೆ. ಹೀಗಾಗಿ ಮತ್ತಷ್ಟು ಪಞ್ಞಾವು ವೃದ್ಧಿಯಾಗುತ್ತದೆ. ಆಗ ಅಲ್ಲಿ ಅನಿತ್ಯದ, ದುಃಖದ ಮತ್ತು ಅನಾತ್ಮದ ಸತ್ಯತೆಗಳು ಸ್ಪಷ್ಟವಾಗಿ ಅರಿವಾಗುತ್ತದೆ. ದಿನನಿತ್ಯದ ಬದುಕಿನಲ್ಲಿ ಭೌತಿಕ ಯಶಸ್ಸಿನ ಜೊತೆಗೆ ಪರಮಾರ್ಥದ ಪ್ರಗತಿಯು ತರುವುದು ಅತ್ಯಂತ ಅವಶ್ಯಕವಾಗಿದೆ.

## 'ಸಬ್ಬ ದಾನಂ ಧಮ್ಮ ದಾನಂ ಜಿನಾತಿ'
## ಎಲ್ಲ ದಾನಗಳಲ್ಲಿ ಧಮ್ಮ ದಾನವು ಶ್ರೇಷ್ಠವಾದುದು

– ಧಮ್ಮಪದ

ಈ ಪುಸ್ತಕ ಮತ್ತು ಇಂಥ ಅನೇಕ ಪುಸ್ತಕಗಳು ಸಾವಿರಾರು ಜನರಿಗೆ ಧಮ್ಮದಾನವಾಗಿ ಕೈ ಸೇರಿವೆ. ಇದು ಧಮ್ಮ ದಾನ ಮಾಡಬೇಕೆಂಬ ಕುಶಲ ಚಿತ್ತದಿಂದ ಯೋಚಿಸಿದವರ ಕೊಡುಗೆ.

ನೀವು ಸಹ ನಿಮ್ಮ ಅಥವಾ ನಿಮ್ಮ ಕುಟುಂಬದವರ ಯಾವುದೇ ವಿಶೇಷ ಸಂದರ್ಭದಲ್ಲಿ, ಅಂದರೆ ಹುಟ್ಟು ಹಬ್ಬ, ಮದುವೆ, ನಾಮಕರಣ, ಪುಣ್ಯ ತಿಥಿ, ಗೃಹಪ್ರವೇಶ ಯಾವುದೇ ರೀತಿಯ ಯಶಸ್ಸು ಇತ್ಯಾದಿಗಳನ್ನು ಆಚರಿಸುವಾಗ ಅದರ ನೆನಪಿನಲ್ಲಿ ಇಂಥ ಚಿಕ್ಕ ದೊಡ್ಡ ಧಮ್ಮದ ಪುಸ್ತಕಗಳನ್ನು ಪ್ರಕಟಿಸಿ ದಾನ ಮಾಡಬಹುದು. ಮಿತ್ರರೊಂದಿಗೆ ಸಂಯುಕ್ತವಾಗಿಯೂ ದಾನ ಮಾಡಬಹುದು.

*ಇದಕ್ಕಾಗಿ ಸಂಪರ್ಕಿಸಿ*

**ಮಹಾ ಬೋಧಿ ಸೊಸೈಟಿ**
14, ಕಾಳಿದಾಸ ಮಾರ್ಗ, ಗಾಂಧಿನಗರ, ಬೆಂಗಳೂರು–560 009
ದೂರವಾಣಿ : 080–22250684 ಫ್ಯಾಕ್ಸ್ : 080–22264438
E-mail : books@mahabodhi.info



## ಮಹಾ ಬೋಧಿ ಸೊಸೈಟಿಗೆ
## ನೀವು ಹೇಗೆ ಸಹಾಯ ಮಾಡಬಹುದು ?

ಮಹಾ ಬೋಧಿ ಸೊಸೈಟಿಯು ಅನೇಕ ಧಮ್ಮ ಸೇವಾ ಕಾರ್ಯಗಳಲ್ಲಿ ತೊಡಗಿದೆ. ತಾವು ಮಹಾಬೋಧಿಯಲ್ಲಿನ ಬಿಕ್ಷು ತರಬೇತಿ ಕೇಂದ್ರಕ್ಕೆ, ಶಾಲೆ, ಹಾಸ್ಟೆಲುಗಳಿಗೆ ಪುಸ್ತಕ ಪ್ರಕಟಣೆಗೆ, ಪ್ರತಿನಿತ್ಯ ಬುದ್ಧ ಪೂಜೆಗಾಗಿ ಅಥವಾ ವಿಶೇಷ ಸೌಕರ್ಯಗಳಿಗಾಗಿ ಸಹಾಯ ಮಾಡಬಹುದು. ಮಹಾಬೋಧಿ ಸೊಸೈಟಿಯನ್ನು ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ.

### ಮಹಾಬೋಧಿ ಬೌದ್ಧ ಅಧ್ಯಯನ ಕೇಂದ್ರ

ಈ ಕೇಂದ್ರವು 2 ವರ್ಷದ ಡಿಪ್ಲೋಮಾ ಕೋರ್ಸುಗಳನ್ನು ಬೌದ್ಧ ಧಮ್ಮದ ಬಗ್ಗೆ ನಡೆಸುತ್ತಿದೆ. ಇದು ಅಂಚೆ ಮೂಲಕವಿದ್ದು ನೀವು ಮನೆಯಲ್ಲಿಯೇ ಓದಬಹುದಾಗಿದೆ. ಪ್ರತಿ ಉಪಾಸಕ–ಉಪಾಸಕಿಯರಿಗೆ ಧಮ್ಮದ ಅರಿವು ಮೂಡಿಸುವುದೇ ಇದರ ಉದ್ದೇಶ.

**ಒಂದು ವರ್ಷಕ್ಕೆ ರೂ. 500/– ಎಲ್ಲ ಸೇರಿ.**

ಸಂಪರ್ಕಿಸಿ : **ಮಹಾಬೋಧಿ ಸೊಸೈಟಿ,** ಬೆಂಗಳೂರು